# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | Email: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 105 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 22.10.2024 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 105 • PRGI No:KARKAN/2023/88055 • VIJAYANAGARA • 22.10.2024 • Tuesday • Page:04 • Rs:2










## ಆನಂದ ಬಾಣ




## ಮೈಕ್ರೋ ನ್ಯೂಸ್

### ಅ. 23 ರಂದು ಸಾರಿಗೆ ಅದಾಲತ್

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ವ್ಯಾಪ್ತಿಯಲ್ಲಿ ಪ್ರಾದೇಶಿಕ ಸಾರಿಗೆ ಇಲಾಖೆ ವತಿಯಿಂದ ಸಾರಿಗೆ ಅದಾಲತ್‌ನ್ನು ಅಕ್ಟೋಬರ್ 23 ರಂದು ಸಂಜೆ 4 ಗಂಟೆಗೆ ಹೊಸಪೇಟೆ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಏರ್ಪಡಿಸಲಾಗಿದ್ದು, ಸಾರ್ವ ಜನಿಕರು ಸದರಿ ಸಾರಿಗೆ ಅದಾಲತ್‌ನ ಉಪಯೋಗ ಪಡೆದುಕೊಳ್ಳಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ ಈಶ್ವರ. ಚವ್ಹಾಣ ತಿಳಿಸಿದ್ದಾರೆ.

### ಕಸಾಪ ಯುವಕವಿ ಗೋಷ್ಠಿಗೆ ಕವಿತೆಗಳ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಕರ್ನಾಟಕ ಸಂಭ್ರಮ-50 ಅಭಿಯಾನದ ಅಂಗವಾಗಿ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗಗಳಲ್ಲಿ ವಿಭಾಗವಾರು ಯುವಕವಿಗೋಷ್ಠಿಗಳನ್ನು ಆಯೋಜಿಸಲಾಗುತ್ತಿದ್ದು, ಆಸಕ್ತ ಅರ್ಹ 20-40 ವಯಸ್ಸಿನ ಯುವಕವಿಗಳಿಂದ ಕವಿತೆಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಕವಿಗಳು ಅ.30ರೊಳಗಾಗಿ ಕನಿಷ್ಠ ಮೂರು ಕವಿತೆಗಳನ್ನು ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಅಕಾಡಮಿ ಜಾಲತಾಣ ವೆಬ್‌ಸೈಟ್ http://karnatakasahithya academy.org ಲಿಂಕ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ತಿಳಿಸಿದ್ದಾರೆ.

### ಅ.23 ಸಿರುಗುಪ್ಪ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಸಿರುಗುಪ್ಪ**

ಸಿರುಗುಪ್ಪ ಜೆಸ್ಕಾಂ ವ್ಯಾಪ್ತಿಯ 110/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಳ್ಳುತ್ತಿರುವುದರಿಂದ ಅ.23 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ಸಿರುಗುಪ್ಪ ನಗರದ ಆದೋನಿ ರಸ್ತೆಗೆ ಹೊಂದಿಕೊಂಡಿರುವ ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಎಫ್-12 ಆದೋನಿ ರಸ್ತೆ ಮತ್ತು ಎಫ್-13 ಅರಳಿಗನೂರು ಕೈಗಾರಿಕಾ ವಿದ್ಯುತ್ ಮಾರ್ಗಗಳಲ್ಲಿ ವಿದ್ಯುತ್ ಸಂಪರ್ಕ ವ್ಯತ್ಯಯವಾಗಲಿದೆ. ನಿರ್ವಹಣೆ ಕಾರ್ಯ ಮುಗಿದ ತಕ್ಷಣ ಯಾವುದೇ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಚಾಲನೆ ಮಾಡುವ ಸಾಧ್ಯತೆ ಇರುತ್ತದೆ, ಗ್ರಾಹಕರು ವಿದ್ಯುತ್ ಮಾರ್ಗಗಳ ಹತ್ತಿರ ಯಾವುದೇ ತರಹದ ಕೆಲಸಗಳನ್ನು ಮಾಡಬಾರದು ಎಂದು ಸಿರುಗುಪ್ಪ ಜೆಸ್ಕಾಂನ ಎಇಇ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕನ್ನಡದ ಮಹತ್ವ ಗೊತ್ತಿರಲಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಅದ್ದೂರಿ ರಾಜ್ಯೋತ್ಸವ ಆಚರಣೆಗೆ ಸೂಚನೆ

## ಜಿಲ್ಲಾಡಳಿತದ ಜೊತೆ ಸಂಘ-ಸಂಸ್ಥೆಗಳು ಕೈಜೋಡಿಸಿ ರಾಜ್ಯೋತ್ಸವದ ಮೆರಗು ಹೆಚ್ಚಿಸಿ



**ಹಂಪಿ ಟೈಮ್ಸ್ ಹೊಸಪೇಟೆ**

ಭಾಷೆ ನಮ್ಮ ಸಂಸ್ಕೃತಿಯನ್ನು ಜೀವಂತವಿಡುವ ಪ್ರಮುಖ ಸಾಧನವಾಗಿದೆ. ಕನ್ನಡಿಗರಾದ ನಾವು ನಮ್ಮ ನಾಡ ಭಾಷೆಯ ಮಹತ್ವ ಅರಿತುಕೊಳ್ಳಬೇಕು, ಈ ನಿಟ್ಟಿನಲ್ಲಿ ರಾಜ್ಯೋತ್ಸವವನ್ನು ಅಚ್ಚುಕಟ್ಟಾಗಿ ಆಚರಣೆ ಮಾಡಲು ಎಲ್ಲಾ ಸಿದ್ದತೆ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಕನ್ನಡ ರಾಜ್ಯೋತ್ಸವ ಆಚರಣೆ ಪೂರ್ವ ಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು ಕನ್ನಡ ರಾಜ್ಯೋತ್ಸವ ಆಚರಣೆಯನ್ನು ಸಾಂಪ್ರದಾಯಿಕವಾಗಿ ಹಾಗೂ ಅಚ್ಚುಕಟ್ಟಾಗಿ ನಡೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ, ಆಚರಣೆ ಮಾಡಲು ಜಿಲ್ಲಾಡಳಿತದ ಜೊತೆ ಸಂಘ-ಸಂಸ್ಥೆಗಳು ಕೈಜೋಡಿಸಿದರೆ ಕನ್ನಡ ರಾಜ್ಯೋತ್ಸವದ ಮೆರಗು ಇನ್ನಷ್ಟು ಹೆಚ್ಚುತ್ತದೆ ಎಂದರು.

ಕನ್ನಡಕ್ಕೆ ಬಂದಿರುವ ಜ್ಞಾನಪೀಠ ಪ್ರಶಸ್ತಿಗಳ ಬಗ್ಗೆ ಜನ ಸಾಮಾನ್ಯರಿಗೂ ತಿಳಿಯುವಂತಾಗಬೇಕು. ಇದಕ್ಕಾಗಿ ಜ್ಞಾನಪೀಠ ಪ್ರಶಸ್ತಿ ಪಡೆದ ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ.ಕೃ.ಗೋಕಾಕ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಮತ್ತು ಚಂದ್ರಶೇಖರ ಕಂಬಾರ ರವರ ಭಾವ ಚಿತ್ರಗಳನ್ನು ನಗರದಲ್ಲಿ ಅಳವಡಿಸಿ ಅವರ ಕೃತಿಗಳ ಬಗ್ಗೆ ಭಾವಚಿತ್ರದ ಕೆಳಗೆ ಬರೆಸಬೇಕು ಎಂದು ನಗರಸಭೆಯ ಪೌರಾಯುಕ್ತರಿಗೆ ಸೂಚಿಸಿದರು.

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರು ಸಭೆ, ಸಮಾರಂಭಗಳಿಗೆ ಭಾಗವಹಿಸುವಿಕೆ ಕಡಿಮೆಯಾಗಿದೆ. ಕನ್ನಡ ರಾಜ್ಯೋತ್ಸವದ ದಿನ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಜೊತೆಗೆ ಸಾರ್ವಜನಿಕರು ಸೇರುವ ಹಾಗೆ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯ ಎಲ್ಲ ಶಾಲಾ-ಕಾಲೇಜುಗಳಲ್ಲಿ ಹಾಗೂ ತಾಲೂಕು ಕೇಂದ್ರಗಳಲ್ಲಿ ನವಂಬರ್ 1 ರಂದು ಕಡ್ಡಾಯವಾಗಿ ರಾಷ್ಟ್ರಧ್ವಜಾರೋಹಣ ಮಾಡಬೇಕು. ಹಂಪಿಯ ಭುವನೇಶ್ವರಿ ದೇವಸ್ಥಾನದಿಂದ ಜಿಲ್ಲಾ ಕ್ರೀಡಾಂಗಣದವರೆಗೆ ಬರುವ ರಾಜ್ಯೋತ್ಸವ ಜ್ಯೋತಿಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಿಕೊಡಬೇಕು. ಹಿಂದಿನ ವರ್ಷದಂತೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸುವ ಪಥ ಸಂಚಲನಾ ಮತ್ತು ಕವಾಯತ್ ತಂಡಗಳ ಸ್ಪರ್ಧೆ, ಮುಖ್ಯ ಅತಿಥಿಗಳಿಂದ ರಾಷ್ಟ್ರಧ್ವಜಾರೋಹಣ, ಪರೇಡ್ ವೀಕ್ಷಣೆ ಹಾಗೂ ಮಕ್ಕಳಿಂದ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ಆಚರಣೆಯಲ್ಲಿ ಯಾವುದೇ ಲೋಪ ದೋಷಗಳಿಲ್ಲದೆ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸಂಘ-ಸಂಸ್ಥೆಗಳ ಮುಖಂಡರು ಮಾನತಾಡಿ, ನಗರದ ಎಲ್ಲ ಮಳಿಗೆಗಳಿಗೆ ಆಳವಡಿಸುರವ ನಮಫಲಕಗಳು ಕಡ್ಡಾಯವಾಗಿ ಕನ್ನಡ ಭಾಷೆಯಲ್ಲಿ ಇರುವಂತೆ ಸೂಚನೆ ನೀಡಿ ಎಂದು ಮನವಿ ಮಾಡಿಕೊಂಡರು. ಅದರಂತೆ ಜಿಲ್ಲಾಧಿಕಾರಿ ಅವರು ನಗರದ ಎಲ್ಲ ಮಳಿಗೆಗಳಿಗೆ ಆಳವಡಿಸಿರುವ ನಾಮಫಲಕಗಳು ಕನ್ನಡ ಭಾಷೆಯಲ್ಲಿ ಇರುವಂತೆ ಕ್ರಮವಹಿಸಿ ಎಂದು ನಗರಸಭೆ ಪೌರಾಯುಕ್ತರಿಗೆ ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಒ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಪದವಿ ಪುರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ನಾಗರಾಜ ಹವಾಲ್ದಾರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್. ಎಸ್., ಹೊಸಪೇಟೆ ತಾಹಶೀಲ್ದಾರರಾದ ಶೃತಿ ಎಂ.ಎಂ., ನಗರಸಭೆ ಪೌರಾಯುಕ್ತರಾದ ಚಂದ್ರಪ್ಪ ಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ.ಕೆ ರಂಗಣ್ಣನವರ ಸೇರಿದಂತೆ ವಿವಿಧ ಅಧಿಕಾರಿಗಳು ಮತ್ತು ಕರ್ನಾಟಕ ರಕ್ಷಣ ವೇದಿಕೆ ಹಾಗೂ ವಿವಿಧ ಸಂಘ-ಸಂಸ್ಥೆಯ ಮುಖಂಡರು ಉಪಸ್ಥಿತರಿದ್ದರು.



# ಕೊಪ್ಪಳ ಜಿಲ್ಲಾ ವಾರ್ತಾಧಿಕಾರಿಯಾಗಿ ಡಾ.ಸುರೇಶ್ ಜಿ ಅಧಿಕಾರ ಸ್ವೀಕಾರ



**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾ ವಾರ್ತಾಧಿಕಾರಿಯಾಗಿ ಡಾ.ಸುರೇಶ್ ಜಿ ಸೋಮವಾರ ಅಧಿಕಾರ ಸ್ವೀಕರಿಸಿದರು.

ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಭಾರಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಗವಿಸಿದ್ದಪ್ಪ ಹೊಸಮನಿ ಅವರು ರಾಯಚೂರು ಜಿಲ್ಗೆಗೆ ವರ್ಗಾವಣೆಯಾದ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಸಹಾಯಕ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ಡಾ.ಸುರೇಶ್ ಜಿ ಅವರು ವಹಿಸಿಕೊಂಡರು ನಿರ್ಗಮಿತ ಅಧಿಕಾರಿಗಳು ನೂತನ ಜಿಲ್ಲಾ ವಾರ್ತಾಧಿಕಾರಿಗಳಿಗೆ ಹೂಗುಚ್ಚ ನೀಡಿ ಅಧಿಕಾರ ಹಸ್ತಾಂತರಿಸಿದರು. ಡಾ.ಸುರೇಶ್ ಜಿ ಅವರು ಬೀದರ್ ಜಿಲ್ಲಾ ವಾರ್ತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದಕ್ಕೂ ಪೂರ್ವದಲ್ಲಿ ಕೊಪ್ಪಳ ಜಿಲ್ಲಾ ಪ್ರಭಾರಿ ವಾರ್ತಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲೆಯ ಪತ್ರಕರ್ತರು, ಕಚೇರಿಯ ಸಿಬ್ಬಂದಿಯವರು ಡಾ.ಸುರೇಶ್ ಜಿ ಅವರಿಗೆ ಆತ್ಮೀಯವಾಗಿ ಸ್ವಾಗತ ಕೋರಿದರು.

# ಇಂದು ಹೊಸಪೇಟೆಗೆ ಕನ್ನಡ ರಥ

**ಹಂಪಿ ಟೈಮ್ಸ್ ಹೊಸಪೇಟೆ**

ಮಂಡ್ಯದಲ್ಲಿ ಡಿಸೆಂಬರ್ ತಿಂಗಳಲ್ಲಿ ನಡೆಯಲ್ಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ರಥವು ನಾಡಿನಾದ್ಯಂತ ಸಂಚರಿಸುತ್ತಿದ್ದು, ಅ.22 ರಂದು ಬೆಳಿಗ್ಗೆ 10.30ಕ್ಕೆ ನಗರದ ಡಾ.ಪುನೀತ್ ರಾಜ್‌ಕುಮಾರ ವೃತ್ತದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸ್ವಾಗತಿಸಲಾಗುತ್ತಿದೆ ಎಂದು ಕಸಾಪ ತಾಲೂಕಧ್ಯಕ್ಷ ಡಾ.ಗುಂಡಿ ಮಾರುತಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು, ಹೋಬಳಿ ಘಟಕದ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರು ಮತ್ತು ಕನ್ನಡಪರ ಸಂಘಟನೆಗಳು ಕನ್ನಡ ರಥ ಸ್ವಾಗತದಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದ್ದಾರೆ. ನಂತರ ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳಿಗೆ ರಥಯಾತ್ರೆ ತೆರಳಲಿದೆ ಎಂದು ತಿಳಿಸಿದ್ದಾರೆ.

# ರಾಯಚೂರು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವಿವಿಧ ಚಿಕಿತ್ಸಾ ಸೌಲಭ್ಯಗಳು ಲಭ್ಯ


**ಹಂಪಿ ಟೈಮ್ಸ್ ರಾಯಚೂರು**

ರಾಯಚೂರು ನಗರದ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವಿವಿಧ ಸೌಲಭ್ಯಗಳಾದ ಕಾರ್ಡಿಯೋಲಜಿ, ಯುರೋಲಜಿ, ಮೆಡಿಕಲ್ ಗ್ಯಾಸ್ಟ್ರೋ ವಿಭಾಗ, ಪ್ಲಾಸ್ಟಿಕ್ ಸರ್ಜರಿ ವಿಭಾಗ, ಪಡೆಯಾಟ್ರಿಕ್ ಸರ್ಜರಿ, ನ್ಯೂರೋಲಜಿ, ನೆಫ್ರಾಲಜಿ, ಸರ್ಜಿಕಲ್ ಗ್ಯಾಸ್ಟ್ರೋ, ಫೆಶಿಯೋ ಮೆಕ್ಸಿಲರಿ ಸರ್ಜರಿ, ಲ್ಯಾಬ್ ಸೇವೆಗಳು ಲಭ್ಯವಿದ್ದು, ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿಶೇಷ ಅಧಿಕಾರಿ ಡಾ.ರಮೇಶ ಸಾಗರ ಅವರು ತಿಳಿಸಿದ್ದಾರೆ.

ಕಾರ್ಡಿಯೋಲಜಿ ವಿಭಾಗದಲ್ಲಿ ಒಟ್ಟು 04 ಹೃದ್ರೋಗ ತಜ್ಞರು ಕಾರ್ಯನಿರ್ವಹಿಸ್ತಿದ್ದು, ವಿಭಾಗದಲ್ಲಿ ಎಮ್.ಡಿ, ಡಿ.ಎಮ್ ಸಹ ಪ್ರಾಧ್ಯಾಪಕರಾದ ಡಾ.ಸುರೇಶ ವಿ.ಸಾಗರದ, ಡಾ.ಪ್ರಶಾಂತ.ಡಿ.ಸಿ, ಎಮ್.ಡಿ, ಡಿ.ಎಮ್ ಹೃದ್ರೋಗ ತಜ್ಞರಾದಡಾ.ಗೋಪಿನಾಥ್.ಜಿ.ವಿ., ಡಾ.ಮುರುಳಿ ರಾವ್ ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಓಪಿಡಿ, ಐಪಿಡಿ, ಇಸಿಜಿ, ಎಕೊ, ಎಂಜಿಯೋಗ್ರಾಮ, ಎಂಜಿಯೋಪ್ಲಾಸ್ಟಿ, ತಾತ್ಕಾಲಿಕ ಪೇಸ್ ಮೇಕರ್, ಖಾಯಂ ಪೇಸ್ ಮೇಕರ್ ತುರ್ತು ಚಿಕಿತ್ಸೆಗಳು ದೊರೆಯುತ್ತವೆ.

ಯುರೋಲಜಿ ವಿಭಾಗದಲ್ಲಿ ಒಟ್ಟು 03 ಯುರೋಲಜಿ ತಜ್ಞರಿದ್ದು, ಎಮ್.ಎಸ್, ಎಮ್.ಸಿ.ಎಚ್ ಸಹ ಪ್ರಾಧ್ಯಾಪಕರಾದ ಡಾ.ಶ್ರೀಶೈಲೇಶ ಅಮರಖೇಡ, ಡಾ.ಪ್ರದೀಪ ಕುಲಕರ್ಣಿ, ಡಾ.ನಿಖಿಲ್ ಅಮೀರಚೆಟ್ಟಿ ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಓಪಿಡಿ, ಐಪಿಡಿ, ಶಸ್ತ್ರಚಿಕಿತ್ಸೆಗಳು, ಮೂತ್ರ ತೊಂದರೆಗಳು, ಮೂತ್ರ ಕೋಶ, ಪ್ರಾಸ್ಟೇಟ್ ಗ್ರಂಥಿ (ಟಿಯುಆರ್‌ಪಿ) ಕಿಡ್ನಿ ಹರಳುಗಳಿಗೆ ಸಂಬಂಧಿತ ತುರ್ತು ಚಿಕಿತ್ಸೆ ಚಿಕಿತ್ಸೆಗಳು ದೊರೆಯುತ್ತವೆ.

ಮೆಡಿಕಲ್ ಗ್ಯಾಸ್ಟ್ರೋ ವಿಭಾಗದಲ್ಲಿ ಒಟ್ಟು 03 ಮೆಡಿಕಲ್ ಗ್ಯಾಸ್ಟ್ರೋ ತಜ್ಞರಿದ್ದು, ಎಮ್.ಡಿ, ಡಿ.ಎಮ್ ಸಹ ಪ್ರಾಧ್ಯಾಪಕರಾದ ಡಾ.ವಿಶ್ವನಾಥ್ ರೆಡ್ಡಿ, ಡಾ.ಮಂಜುನಾಥ,



ಡಾ.ಅನಿಲ ಕುಮಾರ. ಜಿ. ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಓಪಿಡಿ, ಐಪಿಡಿ, ಎಂಡೋಸ್ಕೋಪಿ, ಎಂಡೋಸ್ಕೋಪಿಕ್ ಅಲ್ಟ್ರಾಸೌಂಡ್ ಕೊಲೊನೊಸ್ಕೋಪಿ, ತುರ್ತು ಚಿಕತ್ಸೆ, ಇಆರ್‌ಸಿಪಿ ಚಿಕಿತ್ಸೆಗಳು ದೊರೆಯುತ್ತವೆ.

ಪ್ಲಾಸ್ಟಿಕ್ ಸರ್ಜರಿ ವಿಭಾಗದಲ್ಲಿ ಎಮ್.ಎಸ್, ಎಮ್.ಸಿ.ಎಚ್ ಸಹ ಪ್ರಾಧ್ಯಾಪಕರಾದ ಡಾ.ರಾಘವೇಂದ್ರ. ಎಸ್. ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಓಪಿಡಿ, ಐಪಿಡಿ, ಶಸ್ತ್ರಚಿಕಿತ್ಸೆಗಳು, ಸುಟ್ಟ ಗಾಯಗಳು ಹಾಗೂ ಇನ್ನಿತರ ಸೇವೆಗಳು, ತುರ್ತು ಚಿಕಿತ್ಸೆಗಳು, ಸೀಳು ತುಟಿ ಮತ್ತು ಸೀಳು ಒಳಾಂಗಳ, ಕೈ ಶಸ್ತ್ರ ಚಿಕಿತ್ಸೆ, ಕ್ಯಾನ್‌ಸ್‌ರ್ ರೋಗಿಗಳಲ್ಲಿ ಪುನರ್ ರಚನಾ ಶಸ್ತ್ರ ಚಿಕಿತ್ಸೆ, ಮಧುಮೇಹಿಗಳಲ್ಲಿ ಕಾಲಿನ ಗಾಯಗಳಿಗೆ ಚಿಕಿತ್ಸೆ, ರಸ್ತೆ ಅಪಘಾತದ ಗಾಯಗಳಲ್ಲಿ ಪುನರ್ ರಚನಾ ಶಸ್ತ್ರ ಚಿಕಿತ್ಸೆ ಸೇರಿದಂತೆ ಇತರೆ ಚಿಕಿತ್ಸೆಗಳು ದೊರೆಯುತ್ತವೆ.

ಪೆಡಿಯಾಟ್ರಿಕ್ ಸರ್ಜರಿ ವಿಭಾಗದಲ್ಲಿ ಎಮ್. ಎಸ್, ಎಮ್.ಸಿ.ಎಚ್ ಸಹ ಪ್ರಾಧ್ಯಾಪಕರಾದ ಡಾ.ವಿಜಯಮಹಂತೇಶ ಕುನ್ನೂರು. ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಓಪಿಡಿ, ಐಪಿಡಿ, ಶಸ್ತ್ರಚಿಕಿತ್ಸೆಗಳು, ತುರ್ತು ಚಿಕಿತ್ಸೆಗಳು, ಹರ್ನಿಯಾ / ಹೈಡ್ರೋಸಿಲ್, ಕಾಂಜಿನೆಟಲ್ ಸಿಸ್ಟ್, ಎಕ್ಸಿಲರಿ ಬ್ಲಾಡರ್, ಹೈಪೋಸ್‌ಪೆಡಿಯಸ್ / ಎಪಿಸ್‌ಪೆಡಿಯಸ್ ರಿಪೇರ್, ಡಿಫರನ್ಸ್ ಇನ್ ಸೆಕ್ಸ್ ಡೆವಲಪ್‌ಮೆಂಟ್, ಟ್ರಿಕಿಯಲ್ ಇಸೊಫೇಜಿಯಲ್ ಫಿಶುಲಾ ರಿಪೇರ್, >>3





# ಸ್ಟುಡೆಂಟ್ ಕಾಲಂ

## ಕೃತಕ ಬುದ್ಧಿಮತ್ತೆಯ (AI) ಅನ್ವಯಗಳು



ಪ್ರತಿದಿನ ಕೃತಕ ಬುದ್ಧಿಮತ್ತೆಯ ಹೊಸ ಅನ್ವಯಗಳು ಕಂಡುಹಿಡಿಯಲಾಗುತ್ತದೆ. ಡೇಟಾ ವಿಜ್ಞಾನಿಗಳು ಮತ್ತು ಇತರ ಐಟಿ ವೃತ್ತಿಪರರು ಕೃತಕ ಬುದ್ಧಿಮತ್ತೆಯನ್ನು ಸ್ವಂತವಾಗಿ ಬಳಸುವ ಹೊಸ ವಿಧಾನಗಳನ್ನು ನೋಡುತ್ತಿದ್ದಾರೆ. ಕ್ಲೌಡ್ ಕಂಪ್ಯೂಟಿಂಗ್, ಬಿಗ್ ಡೇಟಾ ಮತ್ತು ವರ್ಧಿತ ರಿಯಾಲಿಟಿ ಮುತಾಂದ ಇತರ ತಂತ್ರಜ್ಞಾನಗಳೊಂದಿಗೆ ಸಂಯೋಜಿಸಿದಾಗ, ಕೃತಕ ಬುದ್ಧಿಮತ್ತೆಯ ಯಂತ್ರ ಕಲಿಕೆ ತಂತ್ರಗಳನ್ನು ಆಳವಾದ ಕಲಿಕೆಯ ವಿಧಾನಗಳೊಂದಿಗೆ ಸಂಯೋಜಿಸುತ್ತದೆ.



**ಇಲ್ಲಿಯವರೆಗಿನ AI ಬೆಳವಣಿಗೆ:** ಒಂದು ಮಾಹಿತಿಯ ಪ್ರಕಾರ ಜಾಗತಿಕ ಕೃತಕ ಬುದ್ಧಿಮತ್ತೆ ಮಾರುಕಟ್ಟೆಯು 2028 ರ ವೇಳೆಗೆ 126 ಶತಕೋಟಿ ಡಾಲರ್ ಮೌಲ್ಯವನ್ನು ಮುಟ್ಟುತ್ತದೆ. ಸರ್ವ್ವಿಯನ್ ಗ್ಲೋಬಲ್ ಸೊಲ್ಯೂಷನ್ಸ್ ಸಂಶೋಧನೆಯು 2025ರ ವೇಳೆಗೆ ಎಲ್ಲಾ ಗ್ರಾಹಕರ ಸಂವಹನಗಳು 95% ರಷ್ಟು ಕೃತಕ ಬುದ್ಧಿಮತ್ತೆ ಘಟಕವನ್ನು ಹೊಂದಿರುತ್ತದೆ ಎಂದು ತೋರಿಸುತ್ತದೆ. ಹಾಗಾಗಿ ಕೃತಕ ಬುದ್ಧಿಮತ್ತೆಯ ಭವಿಷ್ಯವು ಉಜ್ಜಲವಾಗಿದೆ. ಕೃತಕ ಬುದ್ಧಿಮತ್ತೆಯ ಅನ್ವಯಗಳು ಸಾಕಷ್ಟು ಇವೆ. ಕೃತಕ ಬುದ್ಧಿಮತ್ತೆಯು ವೈವಿಧ್ಯಮಯವಾಗಿದೆ ಮತ್ತು ಬಹು ಆಯಾಮವಾಗಿದೆ. ಕೃತಕ ಬುದ್ಧಿಮತ್ತೆಯು ಇಂದು ನಮ್ಮ ಜೀವನದಲ್ಲಿ ಹಲವಾರು ಅನ್ವಯಗಳನ್ನು ಹೊಂದಿವೆ. ಇದನ್ನು ನಾವು ಈಗಾಗಲೇ ನಮ್ಮ ಡಿಜಿಟಲ್ ಮತ್ತು ಆನ್ಲೈನ್ ಅನುಭವಗಳನ್ನು ಪಡೆದುಕೊಂಡಿದ್ದೇವೆ.

ಇಂದು ಕೃತಕ ಬುದ್ಧಿಮತ್ತೆಯನ್ನು ಎಲ್ಲೆಲ್ಲಿ ಬಳಸಲಾಗುತ್ತದೆ ಎಂಬುದನ್ನು ನೋಡೋಣ. ಇ-ಕಾಮರ್ಸ್‌ನಲ್ಲಿ, ನ್ಯಾವಿಗೆಷನ್ ತಂತ್ರಜ್ಞಾನದಲ್ಲಿ, ರೋಬೋಟಿಕ್ಸ್‌ನಲ್ಲಿ, ಮಾನವ ಸಂಪನ್ಮೂಲದಲ್ಲಿ, ಆರೋಗ್ಯ, ಶಿಕ್ಷಣದಲ್ಲಿ, ಕೃಷಿಯಲ್ಲಿ, ಆಟೋಮೊಬೈಲ್‌ನಲ್ಲಿ, ಮಾರ್ಕೆಟಿಂಗ್‌ನಲ್ಲಿ, ಹಣಕಾಸು ಮತ್ತು ಬ್ಯಾಂಕಿಗ್‌ನಲ್ಲಿ, ಬಳಸಲಾಗುತ್ತದೆ. ಕೃತಕ ಬುದ್ಧಿಮತ್ತೆಗಾಗಿ ಅಪ್ಲಿಕೇಶನ್ಗಳು ಎಲ್ಲೆಡೆ ಬೆಳೆಯುತ್ತವೆ. ಹಾಗಾಗಿ ಂಖ ತಂತ್ರಜ್ಞಾನದ ಬಳಕೆ ಅಪಾರವಾಗಿದೆ. ಂಖ ಅಪ್ಲಿಕೇಷನ್ ಮಾಡಲ್‌ಗಳು ದತ್ತಾಂಶ ವಿಜ್ಞಾನಿಗಳಿಗೆ ತರಬೇತಿ ನೀಡಲು ಬಳಸುವ ದೊಡ್ಡ ಪ್ರಮಾಣದ ಡೇಟಾದ ಆಧಾರದ ಮೇಲೆ ಕಾರ್ಯತಂತ್ರದ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು.

ಎಸ್.ಎಂ.ಸೌಜನ್ಯಾ. 8ನೇ ತರಗತಿ.
ಸರ್ಕಾರಿ ಪ್ರೌಢಶಾಲೆ ಬಸರಕೋಡು, ಹ.ಬೊ.ಹಳ್ಳಿ(ತಾ)




## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ...

**ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು

# ದಿವ್ಯಾಂಗ ಗುಂಡು ಎಸೆತಗಾರ ಸಚಿನ್

ಸಚಿನ್ ಸರ್ಜೆರಾವ್ ಖಿಲಾರಿ 23 ಅಕ್ಟೋಬರ್ 1989ರಲ್ಲಿ ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಜಿಲ್ಲೆಯ ಕಾರಗಣಿ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದರು ಇವರ ತಂದೆ ಸರ್ಜೆರಾವ್ ರಂಗನಾಥ್ ಮಹಾರಾಷ್ಟ್ರ ಕೃಷಿ ವಿಭೂಷಣ ಪ್ರಶಸ್ತಿ ಪುರಸ್ಕೃತರಾಗಿ ದ್ದಾರೆ. ಅಂಗವೈಕಲ್ಯ ಸಾಧನೆಗೆ ಅಡ್ಡಿಯಾಗುವ ಬದಲು ಉಡುಗೊರೆ ಎಂಬುದಕ್ಕೆ ಅತ್ಯುತ್ತಮ ಸ್ಪೂರ್ತಿದಾಯಕ ಉದಾಹರಣೆಯಾಗಿದ್ದಾರೆ ಸಚಿನ್.




ಶಾಲೆಯಲ್ಲಿ ಓದುತ್ತಿರುವಾಗ ಸಂಭವಿಸಿದ ಅಪಘಾತದಿಂದ ಎಡಗೈ ತೊಂದರೆಗೆ ಒಳಗಾಗಿ ಹಲವು ವೈದ್ಯೋಪಚಾರ ನಂತರವೂ ಕೈ ಸರಿಯಾಗಿದೆ ಊನತೆಗೆ ಒಳಗಾಗುತ್ತದೆ.

ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ಮಗು ತಂದೆಯ ಆರೈಕೆ ಮತ್ತು ಪ್ರೋತ್ಸಾಹದಿಂದ ಬೆಳದು ಹೆಚ್ಚಿನ ಸಾಧನೆ ಮಾಡಿ ದೇಶಕ್ಕೆ ಕೀರ್ತಿ ತಂದಿರುವ ಉದಾಹರಣೆ ನಿಜಕ್ಕೂ ಪ್ರೇರಣಾದಾಯಕ.

ತನ್ನ ಎಡಗೈ ತೊಂದರೆಯನ್ನು ಒಪ್ಪಿಕೊಂಡು ಸಾಧನೆಗಾಗಿ ಬಲಗೈ ಬಳಸಿಕೊಂಡು ಸಾಧಿಸಿರುವುದು ಸಮರ್ಪಕ ಅಂಗ ಉಳ್ಳವರಿಗೆ ಮಾದರಿ.

2018ರಲ್ಲಿ ದಿವ್ಯಾಂಗರ ಕ್ರೀಡಾಕೂಟದಲ್ಲಿ ಇವರು ಪರಿಚಯಿಸಲ್ಪಟ್ಟು 2017ರ ಜೈಪುರದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕವನ್ನು ಗೆದ್ದು ತರಬೇತುದಾರರಾದ ಸತ್ಯನಾರಾಯಣ ಇವರ ಗಮನವನ್ನು ಸೆಳೆಯುತ್ತಾರೆ ಇವರ ತರಬೇತಿಯಲ್ಲಿ ಸಾಕಷ್ಟು ಪ್ರಗತಿ ಪಡೆದು ಉತ್ತಮ ಕ್ರೀಡಾಪಟುವಾಗಿ 2019ರ ಹೊತ್ತಿಗೆ ಬದಲಾಗು ತ್ತಾರೆ.

ಸಚಿನ್ ಅಂತರಾಷ್ಟ್ರೀಯ ಕ್ರೀಡಾಪಟು ಮಾತ್ರವಲ್ಲದೇ ಓದಿನಲ್ಲಿ ಮುಂದಿದ್ದು ಮೆಕಾನಿಕಲ್ ಇಂಜಿನಿಯರಿಂಗ್ ಪದವಿ(ಇಂದಿರಾ ಕಾಲೇಜು ಆಫ್ ಇಂಜಿನಿಯರಿಂಗ್-ಪುಣೆ) ಪಡೆದಿರುತ್ತಾರೆ ಕ್ರೀಡಾಪಟುಗಳು ಓದಿನಲ್ಲಿ ಅಷ್ಟಕಷ್ಟೇ ಎಂಬುವ ವರಿಗೆ ಇದೊಂದು ಉತ್ತಮ ನಿದರ್ಶನ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಕಲಿತ ವಿದ್ಯೆಯನ್ನು ವಿವಿಧ ಸಂಸ್ಥೆಗಳಲ್ಲಿ ಸಂದರ್ಶಕ ಅಧ್ಯಾಪಕರಾಗಿ ಕೆಲಸ ಮಾಡಿ, ವಿದ್ಯಾರ್ಥಿಗಳಿಗೆ ತಮ್ಮ ಎಂ ಪಿ ಎಸ್ ಇ ಮತ್ತು ಯು ಪಿ ಎಸ್ ಪರೀಕ್ಷೆಯ ತಯಾರಿಯಲ್ಲಿ ಸಹಾಯ ಮಾಡುತ್ತಾರೆ.

ಸಚಿನ್ ಸರ್ಜೆರಾವ್ ಖಿಲಾರಿ ಅವರು



ಪ್ಯಾರಾಲಿಂಪಿಕ್ ಗೇಮ್ಸ್‌ನಲ್ಲಿ ಪುರುಷರ ಶಾಟ್‌ಪುಟ್ ಎಫ್46

ಸ್ಪರ್ಧೆಯಲ್ಲಿ 16.32 ಮೀಟರ್ ಎಸೆದು ಏಷ್ಯನ್ ದಾಖಲೆ ನಿರ್ಮಿಸಿ ಬೆಳ್ಳಿ ಪದಕ ಪಡೆದಿರುತ್ತಾರೆ.

34 ನೇ ವಯಸ್ಸಿನಲ್ಲಿ ಪ್ಯಾರಾಲಿಂಪಿಕ್‌ಗೆ ಪಾದಾರ್ಪಣೆ ಮಾಡಿದ ಸಚಿನ್ ಖಿಲಾರಿ, ಪುರುಷರ ಶಾಟ್‌ಪುಟ್ ಎಫ್-46 ನಲ್ಲಿ 16.32 ಮೀಟರ್‌ಗಳ ಅತ್ಯುತ್ತಮ ಎಸೆತದೊಂದಿಗೆ ಪ್ಯಾರಿಸ್(2024) ಬೆಳ್ಳಿ ಪದಕ ಪಡೆದಿರುತ್ತಾರೆ.

ಎಫ್-46 ವರ್ಗವು ಅಂಗಗಳ ಕೊರತೆ, ದುರ್ಬಲಗೊಂಡ ಸ್ನಾಯು ಶಕ್ತಿ ಅಥವಾ ದುರ್ಬಲಗೊಂಡ ನಿಷ್ಕ್ರಿಯ ವ್ಯಾಪ್ತಿಯ ಚಲನೆಯಿಂದ ಪ್ರಭಾವಿತವಾಗಿರುವ ಮೇಲಿನ ಅಂಗಗಳು ಹೊಂದಿರುವ ಕ್ರೀಡಾಪಟುಗಳು ಸ್ಪರ್ಧಿಸುವ ವಿಭಾಗವಾಗಿದೆ.

ಅಜಮ್ ಕ್ಯಾಂಪಸ್ ಪುಣೆಯಲ್ಲಿ ಅಭ್ಯಾಸ ಮಾಡುತ್ತಿರುವ ಇವರು ಏಷ್ಯನ್ ಪ್ಯಾರಾ ಗೇಮ್ಸ್(2022) ಚಿನ್ನದ ಪದಕ, ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್(2024)ಚಿನ್ನದ ಪದಕ,ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್(2023)ಚಿನ್ನದ ಪದಕ ಹಾಗೂ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ನಲ್ಲಿ ಐದು ಬಾರಿ ಚಿನ್ನದ ಪದಕ ಪಡೆದಿರುತ್ತಾರೆ.

ಮುಂದಿನ ಕ್ರೀಡಾ ಪಯಣದಲ್ಲಿ ಮತ್ತಷ್ಟು ಪದಕಗಳನ್ನು ಗೆದ್ದು ದೇಶದ ಕೀರ್ತಿ ಹೆಚ್ಚಿಸಿ ಜೊತೆಗೆ ನಿಮ್ಮ ಮಾರ್ಗದರ್ಶನದಲ್ಲಿ ಕಲಿತ ವಿದ್ಯಾರ್ಥಿಗಳು ಉನ್ನತ ಸ್ಥಾನಗಳಲ್ಲಿ ವೃತ್ತಿ ಪಡೆದು ದೇಶ ಸೇವೆ ಮಾಡುವಂತರಾಗಲಿ.

# ನೋವಿನ ಸಖ್ಯ, ಬದುಕಿಗೆ ಮುಖ್ಯ

### ಮಕ್ಕಳ ಡಾಕ್ಟರ್‌ಗಳು ಮಕ್ಕಳಿಗೆ ಇಂಜೆಕ್ಷನ್ ಚುಚ್ಚುವಾಗ "ನಿನ್ನ ಹೆಸರೇನು? ಎಷ್ಟನೇ ಕ್ಲಾಸ್? ಯಾವ ಸ್ಕೂಲ್ ?" ಹೀಗೆ ಪ್ರಶ್ನೆ ಮಾಡುತ್ತಾರೆ. ಏಕೆ ಹೀಗೆ ಪ್ರಶ್ನೆ ಮಾಡುತ್ತಾರೆ ಗೊತ್ತಾ ?

ನಾವೆಲ್ಲಾ ಚಿಕ್ಕವರಿರುವಾಗ ನೋವಿಗೆ ತುಂಬಾ ಹೆದರುತ್ತೇವೆ. ಡಾಕ್ಟರ್ ಇಂಜೆಕ್ಷನ್ ಕೊಡುವಾಗ, ಮುಳ್ಳನ್ನು ತುಳಿದಾಗ, ಕಲ್ಲನ್ನು ಎಡವಿ ಕಾಲ್ಬೆರಳಿನ ಉಗುರು ಕಿತ್ತು ಬಂದಾಗ, ಹೋಂ ವರ್ಕ್ ಬರೆಯಲಿಲ್ಲವೆಂದು ಮೇಷ್ಟ್ರು ಕಣ್ಣಲ್ಲಿ ಚುಳ್ ಎಂದು ನೀರು ಬರುವ ಹಾಗೆ ಬೆತ್ತದಿಂದ ಮೃದುವಾದ ಅಂಗೈಗೆ ಬಾರಿಸಿದಾಗ ಇಂತಹ ಸಂದರ್ಭಗಳಲ್ಲಿ "ಈ ನೋವು ಅನ್ನೋದು ಇರಲೇ ಬಾರದಿತ್ತು" ಅಂದುಕೊಂಡಿರುತ್ತೇವೆ. ದೊಡ್ಡವರಾದ ಮೇಲೂ ಹಲ್ಲು ನೋವು, ಹೊಟ್ಟೆ ನೋವು, ತಲೆ ನೋವು ಬಂದಾಗ "ಈ ಹಾಳಾದ ನೋವುಗಳು ಏಕಾದರೂ ಬರುತ್ತವೆಯೋ!" ಅಂಥ ಶಪಿಸ್ತೇವೆ.

ಆದರೆ ನಿಜವಾಗಿ ನೋವು ನಮ್ಮ ಶತ್ರುವಲ್ಲ, ಮಿತ್ರ. ಏಕೆ ಗೊತ್ತೆ? ನೋವೇ ಗೊತ್ತಾಗದಿದ್ದರೆ ನಾವ್ಯಾರೂ ಬದುಕಲು ಸಾಧ್ಯವಾಗುತ್ತಲೇ ಇರಲಿಲ್ಲ. ನೋವಾದಾಗಲೇ ಅಪಾಯಗಳಿಂದ ತಪ್ಪಿಸಿಕೊಳ್ಳುತ್ತೇವೆ. ಏಕೆಂದರೆ ನೋವಾಗದಿದ್ದರೆ ಮುಳ್ಳನ್ನು ಪಾದದ ಇನ್ನಷ್ಟು ಆಳಕ್ಕೆ ಹೋಗುವ ಹಾಗೆ ತುಳಿಯುತ್ತಿದ್ದೆವು. ಚಾಕುವಿನಿಂದ ಸ್ವಲ್ಪ ಕೈ ಕೊಯ್ದುಕೊಂಡಾಗ ನೋವಿನಿಂದ ಕೈ ಹಿಂತೆಗೆದುಕೊಳ್ಳುತ್ತೇವೆ, ನೋವೇ ಇಲ್ಲದಿದ್ದರೆ ಈರುಳ್ಳಿ ಹಚ್ಚುವಾಗ ಬೆರಳೇ ಕಟ್ ಮಾಡಿಕೊಂಡು ಕೈ ಊನ ಮಾಡಿಕೊಳ್ಳುತ್ತಿದ್ದೆವು. ಬೆಂಕಿಗೆ ಮೈ ಸೋಕಿದಾಗ, ಬೆಂಕಿಯಿಂದ ಕಾಲೋ ಕೈಯನ್ನೋ ಪೂರ್ತಿ ಸುಟ್ಟುಕೊಳ್ಳುತ್ತಿದ್ದೆವು. ನಮ್ಮ ದೇಹದ ಭಾಗಗಳಲ್ಲಿ ತೊಂದರೆಯಾದರೂ ಹಲ್ಲು ನೋವು, ತಲೆ ನೋವು, ಹೊಟ್ಟೆ ನೋವು ಯಾವುದೇ ನೋವು ಇಲ್ಲದಾದಾಗ ಚಿಕಿತ್ಸೆ ಪಡೆಯದೆ ದೇಹ ಹಾಳಾಗಿ ಸಾಯುತ್ತಿದ್ದೆವು. ಅಷ್ಟೆಲ್ಲಾ ಏಕೆ, ಯಾವನೋ ಒಬ್ಬ ಕೊಲೆಗಾರ ಚಾಕುವಿನಿಂದ ನಮ್ಮ ಹೊಟ್ಟೆಗೆ ಚುಚ್ಚಿದಾಗಲೂ ನೋವು ಗೊತ್ತಾಗದೆ, ತಪ್ಪಿಸಿಕೊಳ್ಳಲು ಹೋಗದೆ ನಗುನಗುತ್ತಾ ಹಾಗೇ ಸಾಯುತ್ತಿದ್ದೆವು!!


ನಮಗೆ ನೋವಿನ ಅನುಭವ ಆಗುವುದು ಹೇಗೆ? ನೋವನ್ನು ಗ್ರಹಿಸುವ ಗ್ರಾಹಕ ನರಕೋಶಗಳು ನಮ್ಮ ದೇಹದ ಎಲ್ಲಾ ಕಡೆ ಇವೆ. ಇವು ಸಂದೇಶಗಳನ್ನು ನರಗಳ ಮೂಲಕ ಮೆದುಳಿನ ಮಹಾಮಸ್ತಿಷ್ಕಕ್ಕೆ ಸಾಗಿಸಿದಾಗ, ಮೆದುಳು ಸಂದೇಶಗಳನ್ನು ಗ್ರಹಿಸಿ ನಮಗೆ ನೋವಿನ ಅನುಭವ ನೀಡುತ್ತದೆ. ನೋವಿನ ಸಂದೇಶಗಳು ಮೆದುಳನ್ನು ತಲುಪದಿದ್ದರೆ ನಮಗೆ ನೋವಿನ ಅನುಭವ ಆಗುವುದೇ ಇಲ್ಲ. ಆದ್ದರಿಂದಲೇ ಸರ್ಜನ್‌ಗಳು ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲಿ ಕ್ಲೋರೋಫಾರಂನಂತಹ ಅರವಳಿಕೆ ಔಷಧಿಗಳನ್ನು ಬಳಸಿ, ನರಕೋಶಗಳನ್ನು ನಿಷ್ಕ್ರಿಯಗೊಳಿಸಿ, ನೋವಿನ ಸಂದೇಶ ಮೆದುಳಿಗೆ ತಲುಪದಂತೆ ಮಾಡಿ ರೋಗಿಗೆ ನೋವೇ ಆಗದಂತೆ ಮಾಡುತ್ತಾರೆ. ಕುಷ್ಠರೋಗಿಗಳನ್ನು ಗಮನಿಸಿ. ಇದು ನರಗಳಿಗೆ ಬರುವ ರೋಗ ಆಗಿರುವುದರಿಂದ ಕುಷ್ಠರೋಗಿಗಳ ಕೈ ಕಾಲುಗಳ ನರಗಳು ಸತ್ತಿರುತ್ತವೆ. ಅವರಿಗೆ ಕೈ ಕಾಲುಗಳಿಗೆ ಗಾಯವಾದರೆ, ನೋವಿನ ಸಂದೇಶ ಸಾಗಿಸುವ ನರಗಳೇ ಸತ್ತಿರುವುದರಿಂದ ಮೆದುಳಿಗೆ ಸಂದೇಶ ತಲುಪದೆ ನೋವೇ ಗೊತ್ತಾಗುವುದಿಲ್ಲ. ಆದ್ದರಿಂದ ಅವರು ಕೈ ಕಾಲ್ಬೆರಳುಗಳಿಗೆ ಹೆಚ್ಚು ಗಾಯಗಳನ್ನು ಮಾಡಿಕೊಂಡಿರುತ್ತಾರೆ.



ನಟರಾಜು ಮೈದನಹಳ್ಳಿ
ಶಿಕ್ಷಕರು, ಗೌರಿಬಿದನೂರು

Scan For Digital Colourful
HAMPI TIMES E-paper

ಅಂದರೆ ನಮಗೆ ನೋವಿನ ಅನುಭವವಾಗಬೇಕಾದರೆ ನೋವಿನ ಸಂದೇಶಗಳನ್ನು ಮೆದುಳು ಸ್ವೀಕರಿಸಲೇಬೇಕು. ಪುರಾಣ ಕಾಲದಲ್ಲಿ ಋಷಿಗಳು ಹಾಗೂ ಕೆಲವು ರಾಕ್ಷಸರು ತಪಸ್ಸು ಮಾಡುವಾಗ ಚಳಿ, ಮಳೆ, ಗಾಳಿ, ಬಿಸಿಲು, ಹಸಿವು ಯಾವುದಕ್ಕೂ ವಿಚಲಿತರಾಗುತ್ತಿರಲಿಲ್ಲ. ಏಕೆಂದರೆ ಅವರ ಮೆದುಳು ಪೂರ್ತಿ ಧ್ಯಾನದಲ್ಲಿ ಮಗ್ನ ಆಗಿರುತ್ತಿದ್ದುದರಿಂದ ಜ್ಞಾನೇಂದ್ರಿಯಗಳಿಂದ ಬರುವ ಚಳಿ, ಬಿಸಿ ತರದ ಯಾವುದೇ ನೋವಿನ ಸಂದೇಶಗಳನ್ನು ಮೆದುಳು




ಸ್ವೀಕರಿಸುತ್ತಿರಲಿಲ್ಲ. ಆದ್ದರಿಂದ ಅವರಿಗೆ ಯಾವುದೇ ದೈಹಿಕ ನೋವು ಬಾಧಿಸುತ್ತಿರಲಿಲ್ಲ. ನಮಗೆ ಕೆಲವು ಸಾರಿ ಅನುಭವವಾಗಿರುತ್ತದೆ. ನಮ್ಮ ಮನೆಯಲ್ಲಿ ಯಾವುದಾದರೂ ಸಮಾರಂಭ ಇದ್ದು ನಾವು ಅದರ ಉಸ್ತುವಾರಿ, ನಿರ್ವಹಣೆಯಲ್ಲಿ ಬ್ಯುಸಿ ಇದ್ದಾಗ ಕೈಗೋ, ಕಾಲಿಗೋ ಎಲ್ಲೋ ತರಚಿ ಗಾಯವಾಗಿ ರಕ್ತ ಬಂದಿದ್ದರೂ ಗೊತ್ತೇ ಆಗಿರುವುದಿಲ್ಲ, ಆಗ ನೋವು ಆಗಿರುವುದಿಲ್ಲ. ಮಧ್ಯಾಹ್ನ ನಾಲ್ಕು ಗಂಟೆಯಾದರೂ ಊಟ ಮಾಡಿರುವುದಿಲ್ಲ. ಹಸಿವೇ ಆಗಿರುವುದಿಲ್ಲ. ಏಕೆಂದರೆ ಮೆದುಳು ಬ್ಯುಸಿ ಇರುತ್ತೆ. ಬೇರೆ ದಿನಗಳಲ್ಲಿ ಏನೂ ಕೆಲಸ ಇಲ್ಲದೆ ಸುಮ್ಮನೆ ಕುಳಿತಿದ್ದಾಗ ಮಧ್ಯಾಹ್ನ ಒಂದು ಗಂಟೆಗೆ ಹೊಟ್ಟೆ ತಾಳ ಹಾಕುತ್ತಿರುತ್ತದೆ.

ಮಕ್ಕಳ ಡಾಕ್ಟರ್‌ಗಳು ಮಕ್ಕಳಿಗೆ ಇಂಜೆಕ್ಷನ್ ಚುಚ್ಚುವಾಗ "ನಿನ್ನ ಹೆಸರೇನು? ಎಷ್ಟನೇ ಕ್ಲಾಸ್? ಯಾವ ಸ್ಕೂಲ್ ?" ಹೀಗೆ ಪ್ರಶ್ನೆ ಮಾಡುತ್ತಾರೆ. ಏಕೆ ಹೀಗೆ ಪ್ರಶ್ನೆ ಮಾಡುತ್ತಾರೆಂದರೆ- ಮಕ್ಕಳು ಉತ್ತರಿಸಲು ಅವರ ಮೆದುಳು ಬ್ಯುಸಿಯಾಗುವುದರಿಂದ ಅವರಿಗೆ ಸೂಜಿ ಚುಚ್ಚುವಿಕೆಯ ನೋವು ಹೆಚ್ಚು ಅನುಭವವಾಗುವುದಿಲ್ಲ.

ಇನ್ನೊಂದು ವಿಷಯ ಏನ್ ಗೊತ್ತಾ? ಇಡೀ ದೇಹದ ಎಲ್ಲಾ ಭಾಗಗಳ ನೋವನ್ನು ಗ್ರಹಿಸುವ ಮೆದುಳು, ತನಗೇ ಗಾಯವಾದರೆ ಆ ನೋವನ್ನು ಗ್ರಹಿಸುವುದಿಲ್ಲ. ಈಗ ಗೊತ್ತಾಯಿತೇ, ರಿವಾಲ್ವಾರ್ ನಿಂದ ಶೂಟ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವವರು ಹೊಟ್ಟೆಗಾಗಲೀ, ಎದೆಗಾಗಲೀ ಶೂಟ್ ಮಾಡಿಕೊಳ್ಳವುದಿಲ್ಲ. ಕಿವಿಯಿಂದ ಸ್ವಲ್ಪಮೇಲೆಮೆದುಳಿಗೆಏಕೆಶೂಟ್‌ಮಾಡಿಕೊಳ್ಳುತ್ತಾರೆಂದು? ಏಕೆಂದರೆ ಯಾವುದೇ ನೋವಿಲ್ಲದೆ ತಕ್ಷಣ ಸಾಯುತ್ತಾರೆ. ಹಾಗಂತ ನೀವ್ಯಾರು ದಯವಿಟ್ಟು ಟ್ರೈ ಮಾಡಿ ನೋಡಲು ಹೋಗಬೇಡಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪದ್ಮಶ್ರೀ ಪುರಸ್ಕೃತೆ ಡಾ. ಮಾತಾ ಬಿ ಮಂಜಮ್ಮ ಜೋಗತಿ....



ಕನ್ನಡ ರಂಗಭೂಮಿಯ ನಟಿಯು
ಅವಮಾನದಿ ಸನ್ಮಾನಕ್ಕೊಳಗಾದ
ಮಾತೆಯು
ಮಂಜಮ್ಮ ಜೋಗತಿ ನೃತ್ಯಕ್ಕೆ ಪ್ರಖ್ಯಾತಿಯು
ಕರ್ನಾಟಕ ಜಾನಪದ ಅಕಾಡೆಮಿ
ಅಧ್ಯಕ್ಷರಾದ ಹೆಮ್ಮೆಯು

ಹನುಮಂತ ಶೆಟ್ಟಿ ಹಾಗೂ ಜಯಲಕ್ಷ್ಮಿ
ದಂಪತಿಗಳ ಉಸಿರಾಗಿ
ಮೂಢನಂಬಿಕೆಗಳ ಬಲೆಗೆ ತುತ್ತಾಗಿ
ಬೆಳೆದರು ಕರುನಾಡಿನ ನೃತ್ಯಗಾರ್ತಿಯಾಗಿ
ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ
ತಲೆಬಾಗಿ

ಜಾನಪದ ವಿಶ್ವವಿದ್ಯಾಲಯಕೆ ಕಥೆಯಾಗಿ
ಎಂಟು ವಿಶ್ವವಿದ್ಯಾಲಯದ ಪಠ್ಯಕ್ರಮವಾಗಿ
ಬಾಳುತಿದ್ದಾರೆ ಸರಳ ಜೀವಿಯಾಗಿ
ಕರುನಾಡಿನ ಮಹಿಳೆಯರಿಗೆ
ಮಾದರಿಯಾಗಿ

ಪದ್ಮಶ್ರೀ ಪ್ರಶಸ್ತಿಗೆ ಮುತ್ತಿಟ್ಟ
ಮಹಾಮಾತೆಯು
ಮರಿಯಮ್ಮನಹಳ್ಳಿಯಿಂದ ದೆಹಲಿವರೆಗೂ
ಪ್ರಸಿದ್ಧಿಯು
ಸಮಸ್ಯೆಗಳ ಸುಳಿಯಲ್ಲಿ ಬೆಳೆದ ತಾವರೆಯು
ಕಷ್ಟದಲ್ಲಿ ಓದಿದರು ಹತ್ತನೆ ತರಗತಿಯು

ಕಲೆಗಾರ್ತಿಯ ಜೀವನ ಬಲು ರೋಚಕವು
ಕೈಲಾಗದೆಂದವರಿಗೆ ಆದರ್ಶ ಪ್ರಾಯವು
ಶ್ರೇಷ್ಠ ಕಲಾವಿದೆಗೆ ಅಭಿನಂದಿಸಿದೆ ದೇಶವು
ಸಾಮಾನ್ಯರಾಗಿ ಸಾಧಕರಾದ ಇವರಿಗೆ
ನಮನಗಳು

– ಮುತ್ತು ಯ. ವಡ್ಡರ
ಶಿಕ್ಷಕರು, ಬಾಗಲಕೋಟ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
Read FREE
Scan For Digital COLOURFUL
Hampi Times E-paper
PLACE YOUR ADS for Reach Wide Audience
Contact : 94486 33038
E-mail:hampitimes@gmail.com
www.hampitimes.com

# ಪೊಲೀಸ್ ಹುತಾತ್ಮ ದಿನಾಚರಣೆ

## ಪೊಲೀಸ್ ಸಿಬ್ಬಂದಿಯ ಶಕ್ತಿ, ಸ್ಥಿತಿ ಸ್ಥಾಪಕತ್ವ ಮತ್ತು ನಿಸ್ವಾರ್ಥ ಸೇವೆ। ಪೊಲೀಸ್‌ರ ಬಗ್ಗೆ ಕರುಣೆ ತೋರದಿದ್ದರೆ ಬೇಡ, ಸಹಾನುಭೂತಿ ಇರಲಿ.

ಅದೊಂದು ದೊಡ್ಡ ರಾಜಕೀಯ ಕಾರ್ಯಕ್ರಮ. ಅಲ್ಲಿ ಬಂದೋಬಸ್ತಿಗಾಗಿ ಬಂದಿರುವ ನೂರಾರು ಸಾವಿರಾರು ಪೊಲೀಸರು ಮಂತ್ರಿ ಮಾಗಧರಿಗೆ ಎಸ್ಕಾರ್ಟ್ ಆಗಿ, ಜನರನ್ನು ನಿಯಂತ್ರಿಸಲು, ವಾಹನಗಳನ್ನು ಒಂದೆಡೆ ನಿಲ್ಲಿಸಲು, ಯಾವುದೇ ಅವಘಡಗಳಾಗದಂತೆ ಪರಿಸ್ಥಿತಿಯನ್ನು ನಿಭಾಯಿಸಲು ಸನ್ನದ್ದರಾಗಿ ನಿಂತಿದ್ದಾರೆ. ಕಾರ್ಯಕ್ರಮ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾದರೆ ಪೊಲೀಸ್ ಇಲಾಖೆಯವರು ಆರು ಗಂಟೆಗೆ ಎದ್ದು ನಿತ್ಯವಿಧಿಗಳನ್ನು ಪೂರೈಸಿ ತಿಂಡಿ ತಿಂದು ಸ್ಥಳಕ್ಕೆ ಬಂದೋಬಸ್ತಿಗಾಗಿ ಬಂದು ನಿಂತರೆ ಕಾರ್ಯಕ್ರಮ ಮುಗಿದು ಅತಿಥಿಗಳೆಲ್ಲ ತಮ್ಮ ಮನೆ ಸೇರಿದರೂ ಇವರ ಡ್ಯೂಟಿ ಮುಗಿದಿರುವುದಿಲ್ಲ. ಬಂದೋಬಸ್ತಿನ ಗಡಿಬಿಡಿಯಲ್ಲಿ ಎಷ್ಟೋ ಬಾರಿ ಊಟ ತಿಂಡಿಗಳ ಕಡೆ ಇವರ ಗಮನ ಹರಿಯೋದೆ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಇವರ ನಿಸರ್ಗ ಕರೆಗಳಿಗೆ ಯಾವುದೇ ರೀತಿಯಾದ ವ್ಯವಸ್ಥೆಗಳು ಇರುವುದಿಲ್ಲ.

ದೇಶದ ಯಾವುದೇ ಭಾಗದಲ್ಲಿ ಯಾವುದೇ ರೀತಿಯ ಹರತಾಳ, ಗಲಾಟೆ, ಹಿಂಸಾಚಾರ, ದೊಂಬಿಯಂತಹ ಘಟನೆಗಳು ಜರುಗಿದರೂ ಅಲ್ಲಿ ಇವರ ಹಾಜರಿ ಅತ್ಯವಶ್ಯಕ. ಆತ್ಮಹತ್ಯೆಗಳು, ಸಂಶಯಾಸ್ಪದ ಸಾವುಗಳು, ಆಕಸ್ಮಿಕ ಅಪಘಾತಗಳು, ಕೊಲೆ ಸುಲಿಗೆ, ಕಳ್ಳತನ, ದರೋಡೆ ದೊಂಬಿಗಳು ನಡೆದರೂ ಇವರು ಸ್ಥಳದಲ್ಲಿ ಹಾಜರಾಗಲೇಬೇಕು. ಗೊತ್ತಿರಲಿ ಪೊಲೀಸ್ ಕಾರ್ಯಪಡೆ ದೇಶದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡು ವಲ್ಲಿ, ಅಪರಾಧಿಗಳನ್ನು ಸೆರೆ ಹಿಡಿಯುವಲ್ಲಿ, ನೈಸರ್ಗಿಕ ದುರಂತ ಆಕಸ್ಮಿಕ ಅಪಘಾತಗಳಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಹರ್ನಿಶಿ ಪ್ರಯತ್ನಿಸುತ್ತದೆ. ರೌಡಿಗಳನ್ನು ಮಟ್ಟ ಹಾಕಲು, ಕಳ್ಳ ಕಾಕರನ್ನು ಹಿಡಿಯುವ, ಕಳ್ಳ ಸಾಗಾಣಿಕದಾರರನ್ನು ತಡೆಯುವ ಸಂದರ್ಭಗಳಲ್ಲಿ ಎಷ್ಟೋ ಬಾರಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಾಗ ಅವರು ಹತ್ಯೆಗೊಳಗಾಗ ಬಹುದು, ಮರಣಕ್ಕೀಡಾಗಬಹುದು.

ಪೊಲೀಸರ ಇಂತಹ ತ್ಯಾಗ ಮತ್ತು ಬಲಿದಾನಗಳ ಸ್ಮರಣಾರ್ಥವಾಗಿ ಪ್ರತಿ ವರ್ಷ ಅಕ್ಟೋಬರ್ 21 ರಂದು ಪೊಲೀಸ್ ಹುತಾತ್ಮ ದಿನಾಚರಣೆಯನ್ನು ಆಚರಿಸಲಾಗುತ್ತದೆ.



ವೀಣಾ ಹೇಮಂತಗೌಡ ಪಾಟೀಲ್, ಗದಗ್

Scan For Digital Colourful
HAMPI TIMES E-paper

**ಹಿನ್ನೆಲೆ:** 1959ರ ಅಕ್ಟೋಬರ್ 21ರ ದಿನ ಲಡಾಖ್ ನ ಹಾಟ್‌ಸ್ಪಿಂಗ್ ನಲ್ಲಿ ಬಲವಾದ ಶಸ್ತ್ರಗಳನ್ನು ಹೊಂದಿದ ಚೀನಿ ಪಡೆಯು ಪೊಲೀಸರ ಮೇಲೆ ಅನಿರೀಕ್ಷಿತ ದಾಳಿಯನ್ನು ಮಾಡಿದಾಗ ಉಂಟಾದ ಘರ್ಷಣೆಯಲ್ಲಿ ಸುಮಾರು 10 ಜನ ಪೊಲೀಸ್ ಸಿಬ್ಬಂದಿಗಳು ಹುತಾತ್ಮರಾದರು.. ಈ ದಿನದ ಸ್ಮರಣಾರ್ಥವಾಗಿ ಮತ್ತು ಪೊಲೀಸ ಸಿಬ್ಬಂದಿಗಳ ತ್ಯಾಗ ಮತ್ತು ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವಲ್ಲಿ ಅವರ ಪ್ರಮುಖ ಪಾತ್ರವನ್ನು ಗುರುತಿಸಿ ಪ್ರತಿ ವರ್ಷ ಅಕ್ಟೋಬರ್ 21ರ ದಿನವನ್ನು 'ಪೊಲೀಸ್ ಹುತಾತ್ಮ ದಿನಾಚರಣೆ' ಎಂದು ಆಚರಿಸಲಾರಭಿಸಿದರು.



2018ರಲ್ಲಿ ನವದೆಹಲಿಯ ಚಾಣಕ್ಯಪುರಿಯಲ್ಲಿ ನಿರ್ಮಿಸಿದ ರಾಷ್ಟ್ರೀಯ ಪೊಲೀಸ್ ಸ್ಮಾರಕವನ್ನು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ರಾಷ್ಟ್ರಕ್ಕೆ ಸಮರ್ಪಿಸಿದರು.

ದೇಶದ ಆರಕ್ಷಕ ಪಡೆಗಳಿಗೆ ಈ ರಾಷ್ಟ್ರೀಯ ಗುರುತನ್ನು, ಹೆಮ್ಮೆಯ ಉದ್ದೇಶದ ಏಕತೆ, ಸಾಮಾನ್ಯ ಇತಿಹಾಸ ಮತ್ತು ಹಣೆಬರಹವನ್ನು ನೀಡುವ ಪೊಲೀಸ್ ಸ್ಮಾರಕವು ಜೀವದ ಹಂಗನ್ನು ತೊರೆದು ರಾಷ್ಟ್ರವನ್ನು ಸಂರಕ್ಷಿಸುವ ಅವರ ಬದ್ಧತೆಯನ್ನು ಬಲಪಡಿಸುತ್ತದೆ. ಸ್ಮಾರಕದಲ್ಲಿ ಕೇಂದ್ರ ಶಿಲ್ಪವು ಸುಮಾರು 30 ಅಡಿ ಎತ್ತರದ ಗ್ರನೈಟ್ ಏಕಶಿಲೆಯ ಸಮಾಧಿಯಾಗಿದ್ದು ಪೊಲೀಸ್ ಸಿಬ್ಬಂದಿಯ ಶಕ್ತಿ, ಸ್ಥಿತಿ ಸ್ಥಾಪಕತ್ವ ಮತ್ತು ನಿಸ್ವಾರ್ಥ ಸೇವೆಯನ್ನು ಪ್ರತಿನಿಧಿಸುತ್ತದೆ. ಈ ಶೌರ್ಯದ ಗೂಡುಗಳಲ್ಲಿ ಹುತಾತ್ಮರಾದ ಆರಕ್ಷಕ ಸಿಬ್ಬಂದಿಗಳ ಹೆಸರುಗಳನ್ನು ಕೆತ್ತಲಾಗಿದೆ. ವಸ್ತು ಸಂಗ್ರಹಾಲಯದಲ್ಲಿ ಯುದ್ಧದ ಸ್ಮಾರಕಗಳು ಇದ್ದು ಭಾರತದಲ್ಲಿ ಆರಕ್ಷಕ ಪಡೆಯು ಕಾರ್ಯ ನಿರ್ವಹಿಸುತ್ತಿರುವ ದಿನಗಳಿಂದ ಹಿಡಿದು ಇಂದಿನವರೆಗಿನ ಐತಿಹಾಸಿಕ ಮಹತ್ವಪೂರ್ಣ ವಿಷಯಗಳನ್ನು ಕಾಯ್ದಿರಿಸಲಾಗಿದೆ. ಈ ಪೊಲೀಸ್ ಐತಿಹಾಸಿಕ ಸ್ಮಾರಕವು ಸೋಮವಾರ ಹೊರತುಪಡಿಸಿ ಎಲ್ಲಾ ದಿನಗಳಲ್ಲಿ ಸಾರ್ವಜನಿಕರಿಗೆ ತೆರೆದಿರುತ್ತದೆ. ಪ್ರತಿ ಶನಿವಾರ ಮತ್ತು ಭಾನುವಾರ ಸಂಜೆ ಸೂರ್ಯಾಸ್ತದ ಒಂದು ಗಂಟೆ ಮೊದಲು ರಾಷ್ಟ್ರೀಯ ಪೊಲೀಸ್ ಸ್ಮಾರಕದಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿ.ಎ.ಪಿ.ಎಫ್) ಗಳು ಬ್ಯಾಂಡ್ ಪ್ರದರ್ಶನ, ಮೆರವಣಿಗೆ ಮತ್ತು ವೈರಿಗಳನ್ನು ಹಿಮ್ಮೆಟ್ಟುವಿಕೆಯ ಪ್ರಾತ್ಯಕ್ಷಿಕೆಯನ್ನು ಆಯೋಜಿಸುತ್ತಿದೆ.

ಪ್ರತಿ ವರ್ಷವೂ ಪೊಲೀಸ್ ಸ್ಮಾರಕ ಭವನದಲ್ಲಿ ಕೇಂದ್ರದ ಗ್ರಹ ಸಚಿವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ನಡೆಸಿ ಪೊಲೀಸ್ ಹುತಾತ್ಮರಿಗೆ ಗೌರವ ಸಲ್ಲಿಸಲಾಗುತ್ತದೆ. ವಿವಿಧ ರಾಜ್ಯ ಸಚಿವರು ಮತ್ತು ಕೇಂದ್ರ ಸಚಿವರು ಹುತಾತ್ಮರಿಗೆ ಪುಷ್ಪಗಳನ್ನು ಅರ್ಪಿಸುವ ಮೂಲಕ ಗೌರವ ನಮನ ಸಲ್ಲಿಸುತ್ತಾರೆ. ಕೇಂದ್ರ ಗೃಹ ಸಚಿವರು ಸಮಾರಂಭವನ್ನು ಉದ್ದೇಶಿಸಿ ಹುತಾತ್ಮರನ್ನು ಸ್ಮರಿಸುವ ಜೊತೆಗೆ ಆರಕ್ಷಕ ಪಡೆಗಳು ಎದುರಿಸುವ ನಿಜವಾದ ಸವಾಲುಗಳನ್ನು ವಿವರಿಸುತ್ತಾರೆ. ಕಾರ್ಯಕ್ರಮದಲ್ಲಿ ಎಲ್ಲಾ ಹುದ್ದೆಗಳ ಅಧಿಕಾರಿಗಳು ಹಾಜರಾಗಿ ಹಾಟ್ ಸ್ಪಿಂಗ್ನ ಮೂಲ ಶಿಲಾಫಲಕಕ್ಕೆ ಪುಷ್ಪಾಂಜಲಿಯನ್ನುಸಲ್ಲಿಸುವಮೂಲಕಕಾರ್ಯಕ್ರಮಉದ್ಘಾಟಿಸಲಾಗುತ್ತದೆ. ಅಕ್ಟೋಬರ್ 22 ರಿಂದ 30ರವರೆಗೆ ಪೊಲೀಸ್ ಹುತಾತ್ಮ ಕುಟುಂಬ ಸದಸ್ಯರ ಭೇಟಿ ಪೊಲೀಸ್ ಬ್ಯಾಂಡ್ ಪ್ರದರ್ಶನ ಮೋಟಾರ್ ಸೈಕಲ್ ಪಥಸಂಚಲನಗಳು ಇಲ್ಲಿ ನಡೆಯುತ್ತವೆ.

ಇನ್ನು ದೇಶದ ಪ್ರತಿ ಜಿಲ್ಲೆಗಳ ಕ್ರೀಡಾಂಗಣಗಳಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಪ್ರಬಂಧ, ಚಿತ್ರಕಲೆ ಸ್ಪರ್ಧೆಗಳು, ಆಟೋಟಗಳು ಮತ್ತು ರಕ್ತದಾನ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ ಪೊಲೀಸ್ ಸಿಬ್ಬಂದಿಯ ಶೌರ್ಯ, ತ್ಯಾಗ ಮತ್ತು ಬಲಿದಾನಗಳ ಸ್ಮರಣಾರ್ಥ ಕಾರ್ಯಕ್ರಮ ಗಳನ್ನು ಆಯೋಜಿಸಲಾಗುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಅತ್ಯಮೋಘ ಸೇವೆ ಸಲ್ಲಿಸಿದ ಪೊಲೀಸ್ ಸಿಬ್ಬಂದಿಗಳನ್ನು ಗೌರವಿಸಲಾಗುತ್ತದೆ.

ನಮ್ಮ ದೇಶದ ಕಾರ್ಯಾಂಗ ಶಾಸಕಾಂಗ ಮತ್ತು ನ್ಯಾಯಾಂಗಗಳ ಜೊತೆ ಜೊತೆಗೆ ಕಾರ್ಯನಿರ್ವಹಿಸುವ ಪೊಲೀಸ್ ವ್ಯವಸ್ಥೆಯು ಭಾರತ ದೇಶದ ಸಮಗ್ರ ರಕ್ಷಣೆಗೆ ಕಂಕಣಬದ್ದವಾಗಿ ನಿಂತಿದ್ದು, ತಾಯಿ ಭಾರತಿಯ ಸೇವೆಯಲ್ಲಿ ತಮ್ಮ ಸರ್ವಸ್ವವನ್ನು ಅರ್ಪಿಸುತ್ತಾರೆ.

ಆದರೆ ಪೊಲೀಸರು ಎದುರಿಸುತ್ತಿರುವ ಮನೋದೈಹಿಕ ಸಮಸ್ಯೆಗಳು ಹಲವು. ಅನಿಯಮಿತ ಕೆಲಸದ ಅವಧಿ, ನಿಗದಿತವಲ್ಲದ ಊಟೋಪಚಾರ, ಅತ್ಯಂತ ಕಡಿಮೆ ರಜೆಗಳು ಅವರಿಗೆ ಕುಟುಂಬದೊಂದಿಗೆ ಒಡನಾಡಲು ಸಾಧ್ಯವಿಲ್ಲದಷ್ಟು ಕೆಲಸದ ಒತ್ತಡದಿಂದಾಗಿ ಬಹಳಷ್ಟು ಬಾರಿ ಪೊಲೀಸರು ಮಾನಸಿಕವಾಗಿ ಮತ್ತು ದೈಹಿಕವಾಗಿ ದಣಿಯುತ್ತಾರೆ. ಪರಿಣಾಮವಾಗಿ ಅನೇಕ ಆರೋಗ್ಯ ಸಮಸ್ಯೆಗಳನ್ನು ಅನುಭವಿಸುತ್ತಾರೆ.

ಇನ್ನು ಮಹಿಳಾ ಸಿಬ್ಬಂದಿಗಳ ಪರಿಸ್ಥಿತಿ ಮತ್ತಷ್ಟು ಗಂಭೀರ. ಕರ್ತವ್ಯದ ಸಮಯದಲ್ಲಿ ಸ್ತ್ರೀ ಸಹಜವಾದ ಋತುಸ್ರಾವಗಳು, ಬಸಿರು ಬಾಣಂತನಗಳ ಸಮಯದಲ್ಲಿನ ಸೂಕ್ಷ್ಮ ದೈಹಿಕ ಅವಸ್ಥೆಗಳು ಅವರನ್ನು ಇನ್ನಿಲ್ಲದಂತೆ ಕಂಗೆಡಿಸುತ್ತವೆ. ಕರ್ತವ್ಯದ ಕರೆಯ ಮೇರೆಗೆ ಬಂದೋಬಸ್ತಗಾಗಿ ವಿವಿಧೆಡೆ ತೆರಳುವ ಮಹಿಳೆಯರಿಗೆ ಶೌಚಾಲಯಗಳು ಇಲ್ಲದೆ ಇರುವುದು, ವಿಶ್ರಾಂತಿ ಕೋಣೆಗಳು ಇಲ್ಲದೆ ಇರುವುದು ಸಮಸ್ಯೆಯ ಗಂಭೀರತೆಯನ್ನು ಸೂಚಿಸಿದರೆ ಅವರಿಗೆ ಊಟ ತಿಂಡಿಯ ವ್ಯವಸ್ಥೆ ಇಲ್ಲದಿರುವುದು ಅವರ ಕುರಿತಾದ ಅಸಡ್ಡೆಯನ್ನು ತೋರುತ್ತದೆ.

ನಮ್ಮೆಲ್ಲರ ಒಳಿತಿಗಾಗಿ ತಮ್ಮ ಬದುಕಿನ ಬಹುಪಾಲು ಸಮಯವನ್ನು ಕಳೆಯುವ ಪೊಲೀಸ್ ಸಿಬ್ಬಂದಿಗಳನ್ನು ವಿನಾಕಾರಣ ಆಡಿಕೊಳ್ಳುವ ಜನರಿಗೆ ಅವರ ಅಂತರ್ಯದ ನೋವು ಅರಿವಾಗದು. ಅವರ ಮೇಲೆ ಕರುಣೆ ತೋರದಿದ್ದರೆ ಬೇಡ ಸಹಾನುಭೂತಿ ಇರಲಿ.

ಪರ ವಿರೋಧಗಳೇನೆ ಇರಲಿ, ಪೊಲೀಸರು ಸಾರ್ವಜನಿಕ ಬದುಕಿನಲ್ಲಿ ಶಿಸ್ತು ಮತ್ತು ಸಮಗ್ರ ರಕ್ಷಣೆಯನ್ನು ಮಾಡುವವರು. ಅವರ ಕರ್ತವ್ಯ ಪ್ರಜ್ಞೆಗೆ ಮತ್ತು ವೈಯುಕ್ತಿಕ ಘನತೆಗೆ ಯಾವುದೇ ಕುಂದು ಬರದಂತೆ ವರ್ತಿಸೋಣ.

# ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವಿವಿಧ ಸೌಲಭ್ಯಗಳು

**ಮೊದಲ ಪುಟದಿಂದ**

ಇಂಟರ್ಸ್ಟೈನಲ್ ಅಟ್ರಿಷಿಯಾ, ಕಾಂಜಿನೆಟಲ್ ಎನೊರೆಕ್ಟಲ್ ಮಾಲ್‌ಫಾರ್ಮೇಶನ್ ಚಿಕಿತ್ಸೆಗಳು ದೊರೆಯುತ್ತವೆ.

ನ್ಯೂರೋಲಜಿ ವಿಭಾಗದಲ್ಲಿ ಎಮ್.ಡಿ. ಡಾ.ಚಂದ್ರಶೇಖರ ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಓಪಿಡಿ, ಐಪಿಡಿ, ಸೀಜರ್ಸ್, ಪಾರ್ಶ್ವವಾಯು, ಜ್ಞಾಪಕ ಶಕ್ತಿ ತೊಂದರೆ, ತಲೆನೋವು, ಬೆನ್ನು, ಕುತ್ತಿಗೆ ನೋವು, ನರ ದೌರ್ಬಲ್ಯ, ಪಾರ್ಕಿಸ್ಸನ್ಸ್ ರೋಗ,ಬ್ರೇನ್ ಫೀವರ್, ತಲೆ ಸುತ್ತುವದು ಸೇರಿದಂತೆ ಇತರೆ ಚಿಕಿತ್ಸೆಗಳು ದೊರೆಯುತ್ತವೆ.

ನೆಫ್ರಾಲಜಿ ವಿಭಾಗದಲ್ಲಿ ಒಟ್ಟು 02 ನೆಫಾಲಜಿ ತಜ್ಞರಿದ್ದು, ಎಮ್.ಡಿ, ಡಿ.ಎಮ್ ಸಹ ಪ್ರಾಧ್ಯಾಪಕರಾದ ಡಾ.ವಿನಯ ಬದ್ರಿ, ಡಾ.ಶಂಕರ ಗದ್ವಾಲ್ ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಒಟ್ಟು 11 ಡಯಲಸಿಸ್ ಉಪಕರಣಗಳು ಲಭ್ಯವಿರುತ್ತವೆ. ಅಲ್ಲದೆ ಓಪಿಡಿ, ಐಪಿಡಿ,ಡಯಲಸಿಸ್ ಚಿಕಿತ್ಸೆಸೇವೆ ದೊರೆಯುತ್ತವೆ.

ಸರ್ಜಿಕಲ್ ಗ್ಯಾಸ್ಟ್ರೊ ವಿಭಾಗದಲ್ಲಿ ಎಮ್.ಎಸ್. ಎಫ್.ಎಸ್.ಜಿ.ಇ ಸಹ ಪ್ರಾಧ್ಯಾಪಕರಾದ ಡಾ.ಅರುಣ ಕುಮಾರ.ಡಿ ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಓಪಿಡಿ, ಐಪಿಡಿ, ಜಠರದ ಶಸ್ತ್ರ ಚಿಕಿತ್ಸೆಗಳು ಹಾಗೂ ತುರ್ತು ಚಿಕತ್ಸೆ ಸೇವೆಗಳು ದೊರೆಯುತ್ತವೆ.

ಫೆಶಿಯೋ ಮೆಕ್ಸಿಲರಿ ಸರ್ಜರಿ ವಿಭಾಗದಲ್ಲಿ ಬಿ.ಡಿ.ಎಸ್., ಎಮ್.ಡಿ.ಎಸ್ ಪ್ರಾಧ್ಯಾಪಕರಾದ ಡಾ.ವಿನಿತ್ ಜಿ.ಬಿ. ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಓಪಿಡಿ, ಐಪಿಡಿ, ಟೂಥ್ ಎಕ್ಸಾಕ್ಷನ್ಸ್ ಮತ್ತು ಸರ್ಜಿಕಲ್ ರಿಮುವಲ್ ಆಫ್ ವಿಸ್ಡಮ್ ಟೂಥ್, ರಿಮುವಲ್ ಆಫ್ ಸಿಸ್ಟ್ ಮೇಲವಡೆ ಮತ್ತು ಕೆಳ ದವಣೆಯಲ್ಲಿ, ರಿಮುವಲ್ ಆಫ್ ಟೂಮರ್ಸ, ಮೇಲವಡೆ ಮತ್ತು ಕೆಳ ದವಡೆ, ಕೆಳ ದವಣೆ ಮೇಲವಣೆಯ ಮೂಳೆ ಮುರಿತದ ಶಸ್ತ್ರ ಚಿಕಿತ್ಸೆಗಳು, ಬಾಯಿ ನಂಜುಗಳ ಶಸ್ತ್ರ ಚಿಕಿತ್ಸೆ ಸೇವೆಗಳು ದೊರೆಯುತ್ತವೆ.

ಲ್ಯಾಬ್ ವಿಭಾಗದಲ್ಲಿ ಎಮ್.ಡಿ. ಸಹ ಪ್ರಾಧ್ಯಾಪಕರಾದ ಡಾ.ಮಹೇಶ್.ಸಿ.ಹೆಚ್. ಅವರು ಕಾರ್ಯನಿರ್ವತ್ತಿದ್ದು, ವಿಭಾಗದಲ್ಲಿ ಹೆಮಟಾಲಜಿ, ಸೈಟೋಲಜಿ, ವಿಶೇಷ ಬಯೋಕೆಮಿಸ್ಟ್ರಿ ಪರೀಕ್ಷೆಗಳು, ಸೆರೋಲಜಿ, ಕ್ಲಿನಿಕಲ್ ಪೆಥಾಲಜಿ–ಮೂತ್ರದ ಸಂಪೂರ್ಣ ವಿಶ್ಲೇಷಣೆ, ಮೂತ್ರ ವಿದ್ಯುದ್ವಿಚ್ಛೇದ್ಯಗಳು ಹಾಗೂ ರೆಡಿಯೋಲಜಿ ಸೇವೆಗಳಾದ ಎಕ್ಸ್–ರೇ, ಅಲ್ಟ್ರಾಸೌಂಡ್, ಸಿಟಿ ಸ್ಕ್ಯಾನ್ ಸೇವೆಗಳು ದೊರೆಯಲಿದ್ದು, ಎಲ್ಲ ವಿಭಾಗಗಳು ಬೆಳಿಗ್ಗೆ 9ರಿಂದ ಮಧ್ಯಾಹ್ನ 1 ಗಂಟೆಯವರೆಗೂ ಹಾಗೂ ಮಧ್ಯಾಹ್ನ 2ರಿಂದ ಸಂಜೆ 4ಗಂಟೆಯವರಗೂ ಕಾರ್ಯನಿರ್ವಹಿಸಲಿದ್ದಾವೆ ಎಂದು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿಶೇಷ ಅಧಿಕಾರಿ ಡಾ. ರಮೇಶ ಸಾಗರ ಹಾಗೂ ರಿಮ್ಸ್ ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿಗಳಾ ಡಾ.ಕೆ.ಆರ್. ದುರುಗೇಶ್, ರಿಮ್ಸ್ ಆಸ್ಪತ್ರೆಯ ನಿರ್ದೇಶಕ ಡಾ.ರಮೇಶ ಬಿ.ಹೆಚ್ ತಿಳಿಸಿದ್ದಾರೆ.

# ತಿಂಗಳ ಸೊಬಗು: ಸ್ಥಳೀಯ ಕಲಾ ಪ್ರತಿಭೆಗಳ ಅನಾವರಣ



■ ಹಂಪಿ ಟೈಮ್ಸ್ ಬಳ್ಳಾರಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಂಸ್ಕೃತಿಕ ಸಮುಚ್ಚಯ ನಿರ್ವಹಣಾ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ನಾಡೋಜ ಸುಭದ್ರಮ್ಮ ಮನ್ಸೂರು ಬಯಲು ರಂಗಂದಿರದಲ್ಲಿ ಶನಿವಾರದಂದು ಆಯೋಜಿಸಿದ್ದ ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮವು ಸ್ಥಳೀಯ ಕಲಾ ಪ್ರತಿಭೆಗಳ ಕಲೆಗೆ ಅನಾವರಣಕ್ಕೆ ಸಾಕ್ಷಿಯಾಯಿತು. ಕಾರ್ಯಕ್ರಮದಲ್ಲಿ ನೆರೆದಿದ್ದವರು ಭರಪೂರ ಮನರಂಜೆ ಪಡೆದು ಸಾಂಸ್ಕೃತಿಕ ಕಲೆಗೆ ಮನಸೋತರು.

ನಗರದ ಸರ್ಕಾರಿ ಬಾಲಕಿಯರ ಮತ್ತು ಬಾಲಕರ ಬಾಲಮಂದಿರ ತಂಡಗಳ ಜಾನಪದ ನೃತ್ಯವು ಜಾನಪದ ಪ್ರೇಮಿಗಳಲ್ಲಿ ಮನದಲ್ಲಿ ಮನಸೂರೆಗೊಂಡಿತು.

ಬಳ್ಳಾರಿ ತಾಲ್ಲೂಕಿನ ಸಿಂಧುವಾಳ ಗ್ರಾಮದ ಪರಮೇಶ್.ಕೆ ಅವರ ಕೋಲಾಟ ಕಾರ್ಯಕ್ರಮಕ್ಕೆ ಪ್ರೇಕ್ಷಕರು ಮನಸೋತು ಚಪ್ಪಾಳೆ ಸುರಿಮಳೆಗೈದರು. ಸಿರುಗುಪ್ಪದ ವೀರೇಶ್ ದಳವಾಯಿ ಅವರಿಂದ ಸುಗಮ ಸಂಗೀತ ಕಾರ್ಯಕ್ರಮಕ್ಕೆ ಸಂಗೀತ ಪ್ರಿಯರು ತಲೆದೂಗಿದರು. ಒಟ್ಟಿನಲ್ಲಿ ಕಲಾಭಿಮಾನಿಗಳು ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಕಣ್ಮನ ಸೆಳೆದಂತೆ ಸಾಂಸ್ಕೃತಿಕ ಮನರಂಜನೆ ಪಡೆದುಕೊಂಡರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಕಲಾಭಿಮಾನಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ಬಳ್ಳಾರಿಯಲ್ಲಿ ಕನ್ನಡ ಜ್ಯೋತಿ ರಥಕ್ಕೆ ಅದ್ದೂರಿ ಸ್ವಾಗತ

■ ಹಂಪಿ ಟೈಮ್ಸ್ ಬಳ್ಳಾರಿ

ಡಿಸೆಂಬರ್ ನಲ್ಲಿ ಮಂಡ್ಯದಲ್ಲಿ ಜರುಗಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ರಾಜ್ಯಾದ್ಯಂತ ಸಂಚರಿಸುತ್ತಿರುವ ಕನ್ನಡ ಜ್ಯೋತಿ ರಥವು ಭಾನುವಾರದಂದು ಬಳ್ಳಾರಿ ಜಿಲ್ಲೆಗೆ ಆಗಮಿಸಿತು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಸಂಚರಿಸುತ್ತಿರುವ ಕನ್ನಡ ಜ್ಯೋತಿ ರಥಕ್ಕೆ ಬಳ್ಳಾರಿ ನಗರದಲ್ಲಿ ಜಿಲ್ಲಾಡಳಿತ ವತಿಯಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು. ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದ ಆವರಣದಲ್ಲಿ ಗಣ್ಯರೆಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿ ಮೂರ್ತಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು.

ಬಳ್ಳಾರಿ ತಾಲ್ಲೂಕು ತಹಶೀಲ್ದಾರ ಗುರುರಾಜ ಅವರು ಮಾತನಾಡಿ, ಕನ್ನಡ ಭಾಷೆ ಬೆಳೆಸುವಲ್ಲಿ ಪ್ರತಿಯೊಬ್ಬರೂ ಕಂಕಣ ಬದ್ದರಾಗಿ ನಿಲ್ಲಬೇಕು, ಕನ್ನಡ ಉಳಿಸಿ ಬೆಳೆಸುವ ಇಂತಹ ಕಾರ್ಯಕ್ರಮವು ಎಲ್ಲರಲ್ಲೂ ಸಂತೋಷ ಉಂಟು ಮಾಡಿದೆ ಎಂದು ಹೇಳಿದರು.

ಕನ್ನಡ ಜ್ಯೋತಿ ರಥವನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯು ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದ ಆವರಣದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ಬೆಂಗಳೂರು ರಸ್ತೆ, ಬ್ರೂಸ್ ಪೇಟೆ ಪೊಲೀಸ್ ಠಾಣೆ ಮುಂಭಾಗದಿಂದ ಜೈನ್ ಮಾರ್ಕೆಟ್ ರಸ್ತೆಯಲ್ಲಿ ಹೆಚ್.ಆರ್. ಗವಿಯಪ್ಪ ವೃತ್ತದ ಮೂಲಕ ಜಿಲ್ಲಾಧಿಕಾರಿಗಳ ಕಚೇರಿ ಆವರಣಕ್ಕೆ ತಲುಪಿ ಸಂಪನ್ನಗೊಂಡಿತು.



ಕನ್ನಡ ಜ್ಯೋತಿ ರಥದ ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ತಾಷೆ ರಾಮ್ಡೋಲ್ ಸೇರಿದಂತೆ ಹಲವು ಕಲಾ ವಾದ್ಯಗಳು ಸಾಂಸ್ಕೃತಿಕ ಮೆರಗು ತಂದವು.

ಇದಕ್ಕೂ ಮುನ್ನ ಜಿಲ್ಲೆಯ ಸಿರುಗುಪ್ಪ ಪಟ್ಟಣಕ್ಕೆ ಆಗಮಿಸಿದ ಕನ್ನಡ ಜ್ಯೋತಿ ರಥಕ್ಕೆ ಸಿರುಗುಪ್ಪ ತಾಲೂಕ ಆಡಳಿತ, ಸಿರುಗುಪ್ಪ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳು ಹಾಗೂ ಪಟ್ಟಣದ ಜನತೆ ಬರಮಾಡಿಕೊಂಡು ತಾಯಿ ಭುವನೇಶ್ವರಿ ಮೂರ್ತಿಗೆ ಪೂಜೆ ಸಲ್ಲಿಸಿದರು.

ಬಳಿಕ ಕುರುಗೋಡು ಪಟ್ಟಣಕ್ಕೆ ಆಗಮಿಸಿದ ಕನ್ನಡ ಜ್ಯೋತಿ ರಥಕ್ಕೆ ಕುರುಗೋಡು ತಾಲೂಕ ಆಡಳಿತ, ಕುರುಗೋಡು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳು ಹಾಗೂ ಪಟ್ಟಣದ ಜನತೆ ಬರಮಾಡಿಕೊಂಡು ತಾಯಿ ಭುವನೇಶ್ವರಿ ಮೂರ್ತಿಗೆ ಪೂಜೆ ಸಲ್ಲಿಸಿ, ತಾಷೆ–ರಾಮ್ ಡೋಲ್ ಹಾಗೂ ಇತರೆ ವಾದ್ಯಗಳೊಂದಿಗೆ ಪಟ್ಟಣದ ಮುಖ್ಯಬೀದಿಗಳಲ್ಲಿ ಮೆರವಣಿಗೆ ನಡೆಸಿ, ಬಳ್ಳಾರಿ ನಗರಕ್ಕೆ ಬೀಳ್ಕೊಟ್ಟರು.

ಕನ್ನಡ ಜ್ಯೋತಿ ರಥಯಾತ್ರೆ ಮೆರವಣಿಗೆಯು ಸೋಮವಾರದಂದು, ಕಂಪ್ಲಿ ಪಟ್ಟಣಕ್ಕೆ ತೆರಳಿ ಬಳಿಕ ಸಂಡೂರು ಪಟ್ಟಣದಲ್ಲಿ ಸಂಚರಿಸಿ, ವಿಜಯನಗರ ಜಿಲ್ಲೆಗೆ ತೆರಳಲಿದೆ. ರಥವು ತಾಯಿ ಭುವನೇಶ್ವರಿ, ಕಾವೇರಿ ಮಾತೆ, ಉಳುಮೆ ಮಾಡಲು ಸಿದ್ಧವಿರುವ ಎತ್ತುಗಳು ಮತ್ತು ರೈತ, ಜ್ಞಾನ ಪೀಠ ಪುರಸ್ಕೃತರ ಭಾವಚಿತ್ರಗಳು ರಥದಲ್ಲಿ ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ನಾಗರಾಜ, ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಶಿವಾಜಿರಾವ್ ಸೇರಿದಂತೆ ವಿವಿಧ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು, ಕನ್ನಡ ಪ್ರೇಮಿಗಳು, ಸಾರ್ವಜನಿಕರು ಇದ್ದರು.

# ವಿಎಸ್‌ಕೆ ವಿಶ್ವವಿದ್ಯಾಲಯದಲ್ಲಿ ಅ.22, 23 ರಂದು ಅಂತರ ಮಹಾವಿದ್ಯಾಲಯ ಪುರುಷರ ಕಬಡ್ಡಿ ಪಂದ್ಯಾವಳಿ

■ ಹಂಪಿ ಟೈಮ್ಸ್ ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಸ್ತಕ ಸಾಲಿನ ಅಂತರ ಮಹಾವಿದ್ಯಾಲಯ ಪುರುಷರ ಕಬಡ್ಡಿ ಪಂದ್ಯಾವಳಿಗಳನ್ನು ಅ.22 ಮತ್ತು 23 ರಂದು ವಿಶ್ವವಿದ್ಯಾಲಯದ ಮುಖ್ಯ ಆವರಣದ ರಂಗಮಂದಿರದಲ್ಲಿ ಆಯೋಜಿಸಲಾಗಿದ್ದು, ಆಸಕ್ತ ತಂಡಗಳು ಕ್ರೀಡಾಕೂಟದಲ್ಲಿ ಭಾಗವಹಿಸಬಹುದು ಎಂದು ವಿಶ್ವವಿದ್ಯಾಲಯದ ಕುಲಸಚಿವರಾದ ಎಸ್.ಎನ್.ರುದ್ರೇಶ್ ಅವರು ತಿಳಿಸಿದ್ದಾರೆ.

ಈ ಕ್ರೀಡಾಕೂಟದಲ್ಲಿ ಭಾಗವಹಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ವಿವಿಯ ಕ್ರೀಡಾ ವಿಭಾಗ ನಿರ್ದೇಶಕ ಡಾ.ಶಶಿಧರ ಕೆಲ್ಲೂರ (9731417311) ಇವರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**22–10–2024 – ಮಂಗಳವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆರಿದ್ರ |
| ಯೋಗ | : ಪರಿಘ |
| ಕರಣ | : ಗರಜ |
| ಸೂರ್ಯೋದಯ | : 06:28:09 |
| ಸೂರ್ಯಾಸ್ತ | : 17:54:07 |
| ರಾಹು ಕಾಲ | : 15:03–16:28 |
| ಯಮಘಂಡ ಕಾಲ | : 09:20–10:45 |
| ಗುಳಿಕ ಕಾಲ | : 12:11–13:37 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 21–10–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.91 ಅಡಿ |
| ಒಳ ಹರಿವು | 29516 ಕ್ಯುಸೆಕ್ |
| ಹೊರ ಹರಿವು | 29336 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.421 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಇಂದಿನ ಮಟ್ಟ | 1611.77 ಅಡಿ |
| ಒಳ ಹರಿವು | 66 ಕ್ಯುಸೆಕ್ |
| ಹೊರ ಹರಿವು | 9887 ಕ್ಯುಸೆಕ್ |
| ಸಾಮರ್ಥ್ಯ | 41.180 ಟಿಎಂಸಿ |

ADVERTISE WITH US
REACH
THOUSANDS OF POTENTIAL CUSTOMERS
HAMPI TIMES DAILY
Classifieds
Display
Take Advantage of Our Special Discounted rates
For More Information 9448633038
www.hampitimes.com

# ಕರ್ತವ್ಯದಲ್ಲಿ ಪ್ರಾಣತೆತ್ತ ಪೊಲೀಸರ ಸ್ಮರಣೆ ಆದ್ಯ ಕರ್ತವ್ಯ

## ಐಜಿಪಿ ಬಿ.ಎಸ್ ಲೋಕೇಸ್ ಕುಮಾರ್ ಹೇಳಿಕೆ । ಬಳ್ಳಾರಿಯಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಕರ್ತವ್ಯ ಪಾಲನೆಗಾಗಿ ತಮ್ಮ ಪ್ರಾಣವನ್ನೇ ಮುಡಿಪಾಗಿ ಇಟ್ಟು, ಕರ್ತವ್ಯದಲ್ಲಿ ವೀರ ಮರಣ ಹೊಂದಿದ ಪೊಲೀಸ್ ಇಲಾಖೆಯ ಅಧಿಕಾರಿ, ಸಿಬ್ಬಂದಿಯವರ ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರು ಅವರು ಸಂತಾಪ ವ್ಯಕ್ತಪಡಿಸಿದರು.

ಬಳ್ಳಾರಿ ಜಿಲ್ಲಾ ಪೊಲೀಸ್ ವತಿಯಿಂದ ನಗರದ ಜಿಲ್ಲಾ ಪೊಲೀಸ್ ಕವಾಯತ್ ಮೈದಾನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇಶದ ರಕ್ಷಣೆ ಹಾಗೂ ಸಾರ್ವಜನಿಕರ ಹಿತಾಸಕ್ತಿಗಾಗಿ ಅತ್ಯುತ್ತಮ ಸೇವೆ ಸಲ್ಲಿಸಿ ಸುಸ್ಥಿರ ಸಮಾಜ ನಿರ್ಮಿಸುವಲ್ಲಿ ಪೊಲೀಸ್ ಹುತಾತ್ಮರ ಕೊಡುಗೆ ಅಪಾರ. ಈ ದಿನ ಪೊಲೀಸ್ ಹುತಾತ್ಮರಿಗೆ ಗೌರವ ಸಲ್ಲಿಸುತ್ತಾ, ಮುಂದಿನ ದಿನಮಾನಗಳಲ್ಲಿ ಹುತಾತ್ಮರ ಸಂಖ್ಯೆ ಗಣನೀಯವಾಗಿ ಕಡಿಮೆಗೊಂಡು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯವರೂ ತಮ್ಮ ಕುಟುಂಬದವರೊಡನೆ ಶಾಂತಿ–ನೆಮ್ಮದಿ ಜೀವನ ನಡೆಸುವಂತಾಗಬೇಕು ಎಂದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ದೇಶದ ಏಳ್ಗೆಗಾಗಿ ಶ್ರಮಿಸಿ ಆತ್ಮ ಸಮರ್ಪಣೆ ಮಾಡಿದ ಪೊಲೀಸ್ ಹುತಾತ್ಮರ ಸೇವೆ



ಅವಿಸ್ಮರಣೀಯವಾಗಿದೆ. ಪೊಲೀಸರ ಕರ್ತವ್ಯ ನಿಷ್ಠೆಯಿಂದ ಸಮಾಜದಲ್ಲಿ ಶಾಂತಿ, ಸಮಾಧಾನ ನೆಲೆಸಿದ್ದು ಅವರ ತ್ಯಾಗ, ಬಲಿದಾನದಿಂದ ಜೀವತೆತ್ತ ಮಹಾನೀಯರು ಅಜರಾಮರ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭಾರಾಣಿ. ವಿ.ಜೆ ಅವರು ಮಾತನಾಡಿ, 1959 ರ ಅ.21ರಂದು ಸಿಆರ್‌ಪಿಎಫ್ ನ ಡಿವೈಎಸ್‌ಪಿ ಕರಣ್ ಸಿಂಗ್ ಅವರ ನೇತೃತ್ವದಲ್ಲಿ ಒಂದು ಸಿಆರ್‌ಪಿಎಫ್ ತುಕಡಿ ಲಡಾಕ್ ಪ್ರದೇಶದಲ್ಲಿರುವ ಹಾಟ್ ಸ್ಪ್ರಿಂಗ್ ಹತ್ತಿರ ಗಸ್ತು ನಡೆಸುತ್ತಿರುವಾಗ, ಚೈನಾ ದೇಶದ ಸೈನಿಕರು ಸುಸಜ್ಜಿತ ಮದ್ದುಗುಂಡುಗಳು ಮತ್ತು ಆಯುಧಗಳನ್ನು ಹೊಂದಿ, ಹೆಚ್ಚಿನ ಸಂಖ್ಯೆಯಲ್ಲಿ ದಾಳಿ ಮಾಡಿದ್ದರು. ಭಾರತದ ಜವಾನರು ಧೈರ್ಯ ಮತ್ತು ಸಾಹಸದಿಂದ ಚೈನಾ ದೇಶದ ಸೈನಿಕರೊಂದಿಗೆ ಹೋರಾಡಿದರು. ಹೋರಾಟದಲ್ಲಿ 10 ಮಂದಿ ಸಿ.ಆರ್.ಪಿ.ಎಫ್ ಜವಾನರು ವೀರ ಮರಣ ಹೊಂದಿದರು ಹಾಗೂ 9 ಮಂದಿಯನ್ನು ಚೈನಾ ದೇಶದ ಸೈನಿಕರು ದಸ್ತಗಿರಿ ಮಾಡಿದ್ದರು ಎಂದು ಘಟನೆ ವಿವರಿಸಿದರು.

ಸಿಆರ್‌ಪಿಎಫ್ ಜವಾನರ ಧೈರ್ಯ, ಸಾಹಸ ಹಾಗೂ ಆತ್ಮ ಸಮರ್ಪಣೆಯನ್ನು ಭಾರತ ದೇಶದ ಎಲ್ಲಾ ಪ್ರಜೆಗಳು ಇಂದಿಗೂ ಸ್ಮರಿಸುತ್ತಾರೆ. ಅವರ ಸವಿನೆನಪಿಗಾಗಿ ಒಂದು ಸ್ಮಾರಕವನ್ನೂ ಸಹ ನಿರ್ಮಿಸಲಾಗಿದೆ. ವೀರ ಮರಣವನ್ನು ಅಪ್ಪಿದ ಎಲ್ಲಾ ಸಮವಸ್ತ್ರಧಾರಿ ಅಧಿಕಾರಿ ಮತ್ತು ಸಿಬ್ಬಂದಿಗಳ ನೆನಪು ಹಾಗೂ ಶಾಂತಿಗಾಗಿ ದೇಶಾದ್ಯಂತ ಅ.21ರಂದು ಪೊಲೀಸ್ ಹುತಾತ್ಮರ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತಿದೆ ಎಂದರು.

2023–24 ಸಾಲಿನಲ್ಲಿ ದೇಶಾದ್ಯಂತ ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಸೇರಿ ಒಟ್ಟು 219 ಹಾಗೂ ಕರ್ನಾಟಕ ರಾಜ್ಯದ 08 ಸಿಬ್ಬಂದಿಯವರು ಹುತಾತ್ಮರಾಗಿದ್ದು, ಈ ದಿನ ಅವರ ಪ್ರಾಣ ತ್ಯಾಗವನ್ನು ಸ್ಮರಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗಣ್ಯರೆಲ್ಲರೂ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ಗುಚ್ಛ ಅರ್ಪಿಸಿದರು. ಹುತಾತ್ಮರ ಗೌರವ ಸೂಚಕವಾಗಿ ಮೂರು ಸಾರಿ ಕುಶಾಲುತೋಪು ಹಾರಿಸುವ ಮೂಲಕ ಸಂತಾಪ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಲೋಕಾಯುಕ್ತ ಎಸ್‌ಪಿ ಸಿದ್ಧರಾಜು.ಪಿ., ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಕೆ.ಪಿ ರವಿಕುಮಾರ್, ನವೀನ್ ಕುಮಾರ್. ಎನ್ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ದೇಶದ ರಕ್ಷಣೆಯಲ್ಲಿ ಪೊಲೀಸರ ಸೇವೆ ಅವಿಸ್ಮರಣೀಯ : ನಲಿನ್ ಅತುಲ್

■ **ಹಂಪಿ ಟೈಮ್ಸ್ ಕೊಪ್ಪಳ**

ನಮ್ಮ ದೇಶದ ರಕ್ಷಣೆಯಲ್ಲಿ ಸೈನಿಕರ ಮತ್ತು ಪೊಲೀಸರ ಸೇವೆ ಅವಿಸ್ಮರಣೀಯವಾಗಿದೆ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಜಿಲ್ಲಾ ಪೊಲೀಸ್ ಕಾರ್ಯಾಲಯದ ಆವರಣದಲ್ಲಿ ಸೋಮವಾರ ನಡೆದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಸೈನಿಕರು ದೇಶದ ಗಡಿಯಲ್ಲಿ ಸೇವೆ ಸಲ್ಲಿಸಿ ದೇಶವನ್ನು ರಕ್ಷಣೆ ಮಾಡಿದರೆ, ಪೊಲೀಸರು ಜನರ ಮಧ್ಯಯಿದ್ದುಕೊಂಡೇ ಎಲ್ಲರಿಗೂ ರಕ್ಷಣೆ ಒದಗಿಸುತ್ತಾರೆ. ಪ್ರವಾಹ, ಭಯೋತ್ಪಾದನೆಯಂತಹ



ಹಲವಾರು ಆಪತ್ತಿನಿಂದ ನಮ್ಮನ್ನು ರಕ್ಷಿಸಲು ತಮ್ಮ ಜೀವನದ ಹಂಗನ್ನು ತೊರೆದು ಕಾರ್ಯನಿರ್ವಹಿಸುವ ಪೊಲೀಸರ ಸೇವೆ ಬಹಳ ಮಹತ್ವದ್ದಾಗಿದೆ. ಸೈನಿಕರಿಗಿಂತ ದೇಶದಲ್ಲಿನ ಪೊಲೀಸರು ಹೆಚ್ಚು ಸಂಖ್ಯೆಯಲ್ಲಿ ಹುತಾತ್ಮರಾಗಿದ್ದಾರೆ. ಜಿಲ್ಲೆಯಲ್ಲಿ ಇತ್ತೀಚೆಗೆ ಹುತಾತ್ಮರಾದ ಪೊಲೀಸ್‌ರ ಕುಟುಂಬಗಳಿಗೆ ನಾವೆಲ್ಲರೂ ಆತ್ಮಸ್ಥೈರ್ಯ ತುಂಬಬೇಕಾಗಿದೆ ಎಂದು ಅವರು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ ರಾಮ್ ಎಲ್ ಅರಸಿದ್ದಿ ಅವರು ಮಾತನಾಡಿ ದೇಶದಲ್ಲಿ ಹುತಾತ್ಮರಾದ ಪೊಲೀಸರನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ,ಅಪರಜಿಲ್ಲಾಪೊಲೀಸ್‌ವರಿಷ್ಠಾಧಿಕಾರಿಗಳಾದ ಹೇಮಂತ ಕುಮಾರ್ ಸೇರಿದಂತೆ ಡಿ.ವೈ.ಎಸ್.ಪಿ.ಗಳು, ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಹಲವು ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

**ಪೊಲೀಸ್ ಹುತಾತ್ಮರಿಗೆ ಗೌರವ ಸಮರ್ಪಣೆ:** ಕಾರ್ಯಕ್ರಮದ ಆರಂಭದಲ್ಲಿ ಪೊಲೀಸ್ ಸ್ಮಾರಕಕ್ಕೆ ಜಿಲ್ಲಾಧಿಕಾರಿಗಳು, ಜಿ.ಪಂ ಸಿಇಓ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಇತರೆ ಅಧಿಕಾರಿಗಳು ಹಾಗೂ ಹಲವು ಗಣ್ಯರು ಪುಷ್ಪನಮನ ಸಲ್ಲಿಸಿದರು.

# ಗ್ಯಾರಂಟಿ ಯೋಜನೆಗಳನ್ನು ಸಮರ್ಪಕ ಅನುಷ್ಠಾನಕ್ಕೆ ಪ್ರಾಮಾಣಿಕವಾಗಿ ಶ್ರಮವಹಿಸಿ

## ಪ್ರಗತಿ ಪರಿಶೀಲನಾ ಸಭೆಯಲ್ಲಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ್ ಹೇಳಿಕೆ

■ **ಹಂಪಿ ಟೈಮ್ಸ್ ಕೊಪ್ಪಳ**

ಜನ ಸಾಮಾನ್ಯರ ಏಳಿಗೆಗಾಗಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಮಹತ್ತರವಾದ ಐದು ಗ್ಯಾರಂಟಿ ಯೋಜನೆಗಳನ್ನು ಸಾರ್ವಜನಿಕರಿಗೆ ಸಮರ್ಪಕವಾಗಿ ಪ್ರತಿ ತಿಂಗಳು ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರು ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ ಹೇಳಿದರು.

ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಎಚ್ ಪಟೇಲ್ ಸಭಾಂಗಣದಲ್ಲಿ ಸೆ. 19ರಂದು ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಗ್ಯಾರಂಟಿ ಯೋಜನೆಗಳು ರಾಜ್ಯ ಸರ್ಕಾರದ ಮಹತ್ವಕಾಂಕ್ಷೆಯಾಗಿರುವ ಸಾಮಾಜಿಕ ಕಾರ್ಯಕ್ರಮವಾಗಿದೆ. ಅರ್ಹರೆಲ್ಲರೂ ಗ್ಯಾರಂಟಿ ಯೋಜನೆಗಳ ವ್ಯಾಪ್ತಿಗೆ ಒಳಪಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿದ್ದು, ಯಾವುದೇ ಅರ್ಹ ಫಲಾನುಭವಿಗಳು ಈ ಯೋಜನೆಯಿಂದ ಹೊರಗುಳಿಯಬಾರದು. ಪ್ರಮಾಣಿಕವಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸುವಂತಹ ಕೆಲಸವನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮಾಡಬೇಕು. ಶಕ್ತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಯುವನಿಧಿ ಸೇರಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗುತ್ತಿರುವ ಸಣ್ಣ–ಪುಟ್ಟ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆಗಳನ್ನು ತಲುಪಿಸಬೇಕು ಎಂದು ತಿಳಿಸಿದರು.

ಅನ್ನಭಾಗ್ಯ ಯೋಜನೆಗೆ ಸಂಭಂದಿಸಿದಂತೆ ನ್ಯಾಯ ಬೆಲೆ ಅಂಗಡಿಗಳಲ್ಲಿ ಸಿ.ಸಿ ಕ್ಯಾಮರಾಗಳನ್ನು ಅಳವಡಿಸಬೇಕು ಹಾಗೇ ತಿಂಗಳಲ್ಲಿ ರಜೆ ದಿನಗಳನ್ನು ಹೊರತುಪಡಿಸಿ ಎಲ್ಲಾ ದಿನ ಸಾರ್ವಜನಿಕರಿಗೆ ಪಡಿತರವನ್ನು ವಿತರಿಸಬೇಕು. ಗ್ಯಾರಂಟಿ ಯೋಜನೆಗಳ ಸದಸ್ಯರು ಪ್ರತಿ ತಿಂಗಳು ತಾಲ್ಲೂಕುವಾರು ನ್ಯಾಯ ಬೆಲೆ ಅಂಗಡಿಗಳ ಮಾಲೀಕರೊಂದಿಗೆ ಸಭೆ ನಡೆಸಬೇಕು. ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಅಧಿಕಾರಿಗಳಿಗೆ ಅರ್ಹ



ಫಲಾನುಭವಿಗಳು ಸಹಕರಿಸಬೇಕು ಎಂದು ಮನವಿ ಮಾಡಿದರು.

ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೇಯ ಮಾತನಾಡಿ, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಶಕ್ತಿ ಹಾಗೂ ಅನ್ನಭಾಗ್ಯ ಯೋಜನೆಗಳಲ್ಲಿ ತಿರಸ್ಕೃತವಾದ ಅರ್ಜಿಗಳನ್ನು ತಾಲ್ಲೂಕುವಾರು ಜೊತೆಗೆ ಫಲಾನುಭವಿಗಳ ಹೆಸರು ಸಹಿತ ಮಾಹಿತಿಯನ್ನು ಗ್ಯಾರಂಟಿ ಯೋಜನೆಗಳ ಸದಸ್ಯರಿಗೆ ಕೊಡಬೇಕು. ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಶೇ.100 ರಷ್ಟು ಪ್ರಗತಿ ವರದಿಯನ್ನು ಸಾಧಿಸಬೇಕು ಎಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

**ಗೃಹಲಕ್ಷ್ಮಿ:** ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 3,20,440 ಪಡಿತರ ಚೀಟಿಗಳನ್ನು ಹೊಂದಿರುವ ಫಲಾನುಭವಿಗಳಿದ್ದು 3,21,487 ಮನೆ ಯಜಮಾನಿಯರು ಗೃಹಲಕ್ಷ್ಮಿ ಯೋಜನೆಗೆ ನೊಂದಣಿಯಾಗಿದ್ದು, ಆಗಸ್ಟ್–2023 ರಿಂದ ಜುಲೈ –2024 ರವರೆಗೆ ಡಿ.ಬಿ.ಟಿ. ಮೂಲಕ ಒಟ್ಟು ರೂ. 661,88,98,000 ರೂ ಗಳನ್ನು ಪಾವತಿಸಲಾಗಿರುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

**ಗೃಹ ಜ್ಯೋತಿ:** ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 2,73,920 ಫಲಾನುಭವಿಗಳು ಗೃಹ ಜ್ಯೋತಿ ಯೋಜನೆಯಡಿಯಲ್ಲಿ ನೋಂದಣಿ ಯಾಗಿರುತ್ತಾರೆ. ಸೆಪ್ಟೆಂಬರ್–2024 ರ ಅಂತ್ಯಕ್ಕೆ ಸಬ್ಸಿಡಿ ಮೂಲಕ ಒಟ್ಟು ರೂ. 136.80 ಕೋಟಿ ಗಳನ್ನು ಈ ಯೋಜನೆಗೆ ಪಾವತಿಸಲಾಗಿರುತ್ತದೆ ಎಂದು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಮಾಹಿತಿ ನೀಡಿದರು.

**ಯುವನಿಧಿ:** ಯುವನಿಧಿ ಯೋಜನೆಯಡಿ ಡಿಸೆಂಬರ್–2023 ರಿಂದ ಆಗಸ್ಟ್–2024 ರವರೆಗೆ ಒಟ್ಟು 11268 ಫಲಾನುಭವಿಗಳಿಗೆ ಡಿ.ಬಿ.ಟಿ. ಮೂಲಕ ಹಣ ಪಾವತಿಸಲಾಗಿರುತ್ತದೆ. ಇದರಲ್ಲಿ 11125 ಪದವಿಧರರಿಗೆ ತಿಂಗಳಿಗೆ ರೂ. 3,000 ರಂತೆ ಹಾಗೂ 143 ಡಿಪ್ಲೋಮ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. 1,500 ರಂತೆ ಒಟ್ಟು 11268 ವಿದ್ಯಾರ್ಥಿಗಳಿಗೆ ಒಟ್ಟು ಮೊತ್ತ ರೂ. 3.35 ಕೋಟಿಗಳನ್ನು ಪಾವತಿಸಲಾಗಿರುತ್ತದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಅಧಿಕಾರಿಗಳು ಮಾಹಿತಿ ನೀಡಿದರು.

**ಅನ್ನಭಾಗ್ಯ:** ಅನ್ನಭಾಗ್ಯ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 3,21,994 ಪಡಿತರ ಚೀಟಿಗಳ ಫಲಾನುಭವಿಗಳು ಅರ್ಹರಿದ್ದು, ಇದರಲ್ಲಿ 2,95,703 ಫಲಾನುಭವಿಗಳಿಗೆ ಜುಲೈ–2023 ರಿಂದ ಜುಲೈ–2024 ರವರೆಗೆ ಒಟ್ಟು ರೂ. 224.81 ಕೋಟಿ ಗಳ ವೆಚ್ಚ ಭರಿಸಲಾಗಿರುತ್ತದೆ ಎಂದು ಆಹಾರ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

**ಶಕ್ತಿ ಯೋಜನೆ:** ಶಕ್ತಿ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 185.29 ಲಕ್ಷ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯಡಿ ಸೆಪ್ಟೆಂಬರ್ 2024 ರವರೆಗೆ ಉಚಿತವಾಗಿ ಪ್ರಯಾಣಿಸಿದ್ದಾರೆ ಎಂದು ಕಲ್ಯಾಣ ಕರ್ನಾಟಕದ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

ಈ ಸಂಧರ್ಭದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಟಿ ಖಾದ್ರಿ, ಅಮರೇಶ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಅನುಷ್ಠಾನ ಪ್ರಾಧಿಕಾರದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಮಾರ್ಗದರ್ಶಿ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

www.hampitimes.com - Hampi Times Margadarshi

### ಪ್ರಬಂಧಗಳು : ಪ್ರಬಂಧ ರಚನಾ ವಿಧಾನ

**1) ಪೀಠಿಕೆ (ಪ್ರಸ್ತಾವಣೆ) – ಪ್ರಬಂಧದ ಪ್ರಾರಂಭ ಸಂಕ್ಷಿಪ್ತವಾಗಿರಬೇಕು. ವಿಷಯದ ಅರ್ಥ ಸೂಚಿಸುವಂತಿರಬೇಕು. – 1 ಅಂಕ**

**2) ವಿಷಯ ವಿವರಣೆ– ಇದು ಪ್ರಬಂಧದ ಹೃದಯ, ತಾರ್ಕಿಕವಾಗಿ ವಿವರವಾಗಿರಬೇಕು– 2 ಅಂಕ**

**3) ಉಪಸಂಹಾರ– ಪ್ರಬಂಧದ ಮುಕ್ತಾಯ ಸಂಕ್ಷಿಪ್ತವಾಗಿರಬೇಕು ಮತ್ತು ಪರಿಣಾಮಕಾರಿಯಾಗಿರಬೇಕು.– 1 ಅಂಕ**

**4) ಭಾಷಾ ಶೈಲಿ, ಪದಬಳಕೆ, ವಿನ್ಯಾಸ– 1 ಅಂಕ ಒಟ್ಟು = 5 ಅಂಕಗಳು**

**ಕೆಲವು ಮಹತ್ವದ ಪ್ರಬಂಧಗಳು**

### ರಾಷ್ಟ್ರೀಯ ಹಬ್ಬಗಳ ಮಹತ್ವ.

**ಪೀಠಿಕೆ:** ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದಂತಹ ವೈವಿಧ್ಯಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ. ಇಡಿ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇದಭಾವವಿಲ್ಲದೆ, ಜಾತಿ, ಧರ್ಮ, ಪ್ರಾದೇಶಿಕ ಬಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು ಎಂದು ಕರೆಯಬಹುದು. ನಮ್ಮ ದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಷಿಸಲಾಗಿದೆ. ಅವುಗಳೆಂದರೆ **1) ಸ್ವಾತಂತ್ರ್ಯ ದಿನಾಚರಣೆ 2) ಗಣರಾಜ್ಯೋತ್ಸವ 3) ಗಾಂಧಿ ಜಯಂತಿ.**

**ವಿಷಯ ವಿವರಣೆ :** 1) ಸ್ವಾತಂತ್ರ್ಯ ದಿನಾಚರಣೆಃ ಭಾರತ ಸುಮಾರು ಎರಡು ಮುನ್ನೂರು ವರ್ಷಗಳ ಕಾಲ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ವ್ಯಾಪಾರದ ಉದ್ದೇಶದಿಂದ ಬಂದ ಬ್ರಿಟಿಷರು ಭಾರತೀಯ ಅರಸರುಗಳ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಭಾರತ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು. ಭಾರತೀಯರಿಗೆ ಸ್ವಾತಂತ್ರ್ಯ ಎನ್ನುವುದೇ ಇರಲಿಲ್ಲ. ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ರಣಕಹಳೆಯನ್ನು ಊದಿ ಕೊನೆಗೆ 1947ನೇ ಅಗಸ್ಟ್ 15 ರಂದು ಸ್ವಾತಂತ್ರ್ಯವನ್ನು ಪಡೆದರು. ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ ರಾಷ್ಟ್ರೀಯ ಐಕ್ಯತೆಯನ್ನು ಮೆರೆಯುತ್ತಾರೆ. ಅಂದು ಶಾಲಾ ಕಾಲೇಜು, ಕಛೇರಿಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

2) ಗಣರಾಜ್ಯೋತ್ಸವಃ ಭಾರತ ದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಆಡಳಿತದ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತದೆ. ಆ ರೂಪುರೇಷೆಗಳನ್ನು ಒಳಗೊಂಡಿರುವುದೇ ನಮ್ಮ ಸಂವಿಧಾನ. ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ ಉತ್ತಮವಾದ ಆಡಳಿತವನ್ನು ನಡೆಸಲು ಕಾನೂನು ರೂಪ ಪಡೆದ ಸಂವಿಧಾನವನ್ನು ಜನವರಿ 26, 1950 ರಲ್ಲಿ ಜಾರಿಗೆ ತರಲಾಯಿತು. ಆ ದಿನವೇ ಗಣರಾಜ್ಯ ದಿನ. ಇದನ್ನೂ ಕೂಡ ನಮ್ಮ ದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ. ಈ ದಿನದಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸಿ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸುತ್ತಾರೆ. ಪ್ರತಿಯೊಬ್ಬರು ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಆಶಯವನ್ನು ಪಡೆಯುತ್ತಾರೆ. ಹಾಗೆಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

3) ಗಾಂಧಿ ಜಯಂತಿಃ ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು. ನಾಯಕರಿಲ್ಲದ ನಾವೆ ದಡ ಸೇರಲಾರದು. ಅಂತೆಯೇ ನಮ್ಮ ದೇಶದ ಸ್ವಾತಂತ್ರ್ಯ ಪಡೆಯಲು ಬಹುಮುಖ್ಯ ನಾಯಕತ್ವ ವಹಿಸಿಕೊಂಡವರು ನಮ್ಮ ದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮಾ ಗಾಂಧೀಜಿಯವರು. ಅವರ ಹುಟ್ಟಿದ ದಿನವೇ ಅಕ್ಟೋಬರ 2 ಆ ದಿನವನ್ನು ಗಾಂಧಿ ಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸುತ್ತಾರೆ. ಏಕೆಂದರೆ ಗಾಂಧೀಜಿಯವರು ಸ್ವತಂತ್ರ ಚಳುವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದು ಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುತ್ತ, ಅವರನ್ನು ಸ್ಮರಿಸುತ್ತ ಸ್ವಾತಂತ್ರ್ಯದ ಮಹತ್ವದ ಬಗ್ಗೆ ಕೊಂಡಾಡುವ ದಿನವಾಗಿದೆ.

ಉಪಸಂಹಾರಃ ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ, ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

### ಗ್ರಂಥಾಲಯದ ಮಹತ್ವ

**ಪೀಠಿಕೆ:** "ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ" ನಾಣ್ಣುಡಿಯಂತೆ ಗ್ರಂಥಗಳನ್ನು ಹೊಂದಿ ಆತ್ಮವನ್ನು ಇಟ್ಟುಕೊಳ್ಳಬೇಕು. ಇಂದಿನ ಯುಗದಲ್ಲಿ ಜ್ಞಾನಾಭಿವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಎನಿಸುತ್ತವೆ. ಜ್ಞಾನಾರ್ಜನೆಗೆ ಅಗತ್ಯವಾದ ಗ್ರಂಥಗಳಿರುವ ಆಲಯವೇ ಗ್ರಂಥಾಲಯ. ಅದಕ್ಕೆಂದೇ ಶಾಲಾ ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ.

ವಿಷಯ ವಿವರಣೆಃ ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಮನುಷ್ಯನ ದೇಹಕ್ಕೆ ಅನ್ನ, ನೀರು, ಗಾಳಿ ಎಷ್ಟು ಮುಖ್ಯವೋ ಹಾಗೆಯೇ ಮಾನವನ ಮನಸ್ಸಿನ ವಿಕಾಸಕ್ಕೆ ಪುಸ್ತಕಗಳು ಅವಶ್ಯಕವಾಗಿರುತ್ತವೆ. ಪುಸ್ತಕಗಳು ಆತ್ಮೀಯ ಮಿತ್ರರಿದ್ದಂತೆ. ಸದಾ ಒಳ್ಳೆಯ ಯೋಚನೆಗಳಿಗೆ ದಾರಿ ಮಾಡಿಕೊಡುತ್ತವೆ. ಜ್ಞಾನವಿಕಾಸಕ್ಕಾಗಿಯೇ ಸಾರ್ವಜನಿಕವಾಗಿಯೂ ಮತ್ತು ಶಾಲಾ ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯದ ಅಂದರೆ ಸಾಹಿತ್ಯ, ಇತಿಹಾಸ, ಪುರಾಣ, ವಿಜ್ಞಾನ, ತಂತ್ರಜ್ಞಾನ, ಮಕ್ಕಳ ಸಾಹಿತ್ಯ, ಮೊದಲಾದ ವಿಷಯಗಳ ಗ್ರಂಥಗಳನ್ನು ಇಟ್ಟಿರುತ್ತಾರೆ. ಗ್ರಂಥಾಲಯಗಳು ಜ್ಞಾನದ ನಿಧಿಗಳಿದ್ದಂತೆ. ಅಂತಹ ಜ್ಞಾನ ನಿಧಿಗೆ ಕೈ ಹಾಕಿ ನಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು.

ಓದುವ ಹವ್ಯಾಸವುಳ್ಳವರು ಗ್ರಂಥಾಲಯಗಳನ್ನು ದೇವಾಲಯದಂತೆ ಕಾಣುತ್ತಾರೆ. ಉನ್ನತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗಂತೂ ಜ್ಞಾನ ದಾಸೋಹದ ಮನೆಗಳಿದ್ದಂತೆ. ಅಲ್ಲಿ ಜ್ಞಾನವೆಂಬ ಆಹಾರ ಸೇವಿಸುವವರಿಗೆ ಅದರ ರುಚಿ ಅರಿವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲದ ಮೂಲಕ ಜ್ಞಾನವನ್ನು ಗಳಿಸಿಕೊಳ್ಳಬಹುದು. ಅದಕ್ಕೆಂದೇ ಇ–ಲೈಬ್ರರಿಗಳನ್ನು ತೆರೆಯಲಾಗಿದೆ. ಎಲ್ಲ ಪುಸ್ತಕಗಳನ್ನು ಅಂತರ್ಜಾಲಕ್ಕೆ ಸೇರಿಸಲಾಗುತ್ತಿದೆ.

ಉಪಸಂಹಾರ: ಒಟ್ಟಾರೆಯಾಗಿ ಜೀವನದ ನಿಜವಾದ ಮೌಲ್ಯ ಮತ್ತು ಸಾರ್ಥಕತೆಯನ್ನು ತಿಳಿಸಿಕೊಡುವಲ್ಲಿ, ಜೀವನದ ಬಗೆಗೆ ಭರವಸೆಯನ್ನು ತುಂಬುವಲ್ಲಿ ಮತ್ತು ಚಾರಿತ್ರ್ಯವನ್ನು ನಿರ್ವಹಿಸುವಲ್ಲಿ ಪುಸ್ತಕಗಳ ಪಾತ್ರ ಹಿರಿದು. ಇಂತಹ ಪುಸ್ತಕಗಳನ್ನೊಳಗೊಂಡ ಗ್ರಂಥಾಲಯದ ಸದ್ಬಳಕೆಯಿಂದ ಸ್ವಯಂ ವ್ಯಕ್ತಿತ್ವ ವಿಕಾಸ ಹಾಗೂ ಶೈಕ್ಷಣಿಕ ಪ್ರಕ್ರಿಯೆಗಳ ಉತ್ತಮ ನಿರ್ವಹಣೆ ಸಾಧ್ಯವಾಗುತ್ತದೆ. ಆದ್ದರಿಂದ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಿ ಕಾಲಕಾಲಕ್ಕೆ ಅದನ್ನು ವಾಸ್ತವಿಕ ನೆಲೆಗಟ್ಟಿಗೆ ತಕ್ಕಂತೆ ವಿಸ್ತ್ರತಗೊಳಿಸುವುದು ನಮ್ಮ ಕರ್ತವ್ಯವಾಗಬೇಕು.

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ(ತಾ) ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ